ನಮಗೆ ಸಂದೇಹವಾಗಿಬಿಟ್ಟಿದೆ. ತಾವು ನಮಗೆ ಖಂಡಿತವಾಗಿ ಅವಕಾಶ ಕೊಡುತ್ತೇವೆಂದು ಹೇಳಿದರೆ, ನಮ್ಮದು ಏನು ಅಭ್ಯಂತರವಿಲ್ಲ.

ಅಧ್ಯಕ್ಷರು :– ಕೊಡುತ್ತೇನೆ, ಎಂದು ಹೇಳುತ್ತಿದ್ದೇನೆ. ಈಗ ತಾವು ಕುಳಿತುಕೊಳ್ಳಿ, ಈಗ ಸರ್ಕಾರಕ್ಕೆ ಪ್ರಸ್ತಾಪ ಮಾಡಿದ್ದಾರೆ, ಈಗ ಕುಳಿತುಕೊಳ್ಳಿ, ನಿಮಗೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು :– ಮಾನ್ಯ ಅಧ್ಯಕ್ಷರೆ, ಅದು ಮುಗಿದ ತಕ್ಷಣ ನಮಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ವಿಷಯ :– (ಆ) ರಾಜ್ಯದಲ್ಲಿ ಉಂಟಾಗಿರುವ ಬರಗಾಲದ ಬಗ್ಗೆ :

ಶ್ರೀ ಎನ್. ಧರ್ಮಸಿಂಗ್ :– ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಪ್ರವಾಸದಲ್ಲಿ ಇದ್ದಾರೆ. ಇಲ್ಲಿ ಸದನ ನಡೆಯುತ್ತಿದೆ, ರಾಜ್ಯದ ಉಪ ಮುಖ್ಯಮಂತ್ರಿಯವರು ಹಣಕಾಸಿನ ಮಂತ್ರಿಗಳಾಗಿದ್ದಾರೆ. ನಿನ್ನೆ ಅವರು ಗುಲ್ಬರ್ಗಾದಲ್ಲಿ regional imbalance ಅನ್ನು ಸರಿಪಡಿಸುವುದಕ್ಕೆ 32 ಸಾವಿರ ಕೋಟಿ ರೂಪಾಯಿಗಳ ಖರ್ಚನ್ನು ಕೊಡುತ್ತೇನೆಂದು ಹೇಳಿದ್ದಾರೆ. 203 ಕೋಟಿ ರೂಪಾಯಿಗಳನ್ನು ಕೊಟ್ಟು, 217 ಕೋಟಿ ರೂಪಾಯಿಗಳನ್ನು ಮಾಡುವಂಥ ರೀತಿಯಲ್ಲಿ ಸದನದ ಹಕ್ಕುಚ್ಯುತಿಯಾಗಿದೆಯೆಂದು ಹೇಳಿದ್ದೇವೆ. ಈಗ ಸದನ ನಡೆಯುವಂಥ ಕಾಲದಲ್ಲಿ ಇವತ್ತು ವಿಕಾಸಯಾತ್ರೆಯಲ್ಲಿ ಅವರು ಸಾರಥಿಯಾಗಿ ಭಾಗವಹಿಸಿ, 32 ಸಾವಿರ ಕೋಟಿ ರೂಪಾಯಿಗಳನ್ನು, ಇವತ್ತು ಬಜೆಟ್‌ನಲ್ಲಿನ ಹಣಕ್ಕಿಂತ ಹೆಚ್ಚಿನ ಹಣವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ಕೂಡ ಚರ್ಚೆಯಾಗಬೇಕಾಗಿದೆ. ಅದಕ್ಕೆ ನಾವು ಈ ಎರಡೂ ವಿಷಯಗಳನ್ನು ಕೂಡಿಸಿದ್ದು, ಈಗ ಬರಗಾಲದ ಬಗ್ಗೆ ಚರ್ಚೆ ಪ್ರಾರಂಭವಾಗಬೇಕು. ಈಗ ವಿಧೇಯಕವನ್ನು ತೆಗೆದುಕೊಳ್ಳುವಂಥಾದ್ದು ಸರಿಯಲ್ಲ. ರಾಜ್ಯದ ಹಿತದೃಷ್ಟಿಯಿಂದ, ಇವತ್ತು ರಾಜ್ಯದಲ್ಲಿ ಏನು ತೊಂದರೆಯಾಗಿದೆ. ಇವತ್ತು ಸರ್ಕಾರ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ಅದರ ಬಗ್ಗೆ ಇಲ್ಲಿ ಚರ್ಚೆಯಾಗಬೇಕಾಗಿದೆ. ತಾವು ಈ ಚರ್ಚೆಯನ್ನು ಈಗಲೇ ಪ್ರಾರಂಭ ಮಾಡುವುದಕ್ಕೆ ಅನುಮತಿಯನ್ನು ಕೊಡಬೇಕು. ತದನಂತರ ವಿಧೇಯಕ, ಪ್ರಶ್ನೋತ್ತರವನ್ನು ತೆಗೆದುಕೊಳ್ಳಬೇಕು.

ಶ್ರೀ ಎಂ.ಪಿ. ಪ್ರಕಾಶ್ :– ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ಅರಿಕೆ ಮಾಡಿಕೊಳ್ಳುವುದಿಷ್ಟೆ, ಮಾನ್ಯ ವಿರೋಧಪಕ್ಷದ ನಾಯಕರು ಈಗ ಏನು ಹೇಳಿದರು. ಅದರ ಬಗ್ಗೆ, ಬರಗಾಲದ ವಿಚಾರವಾಗಿ ಅವರು ನಿಯಮ 60 ರ ಕೆಳಗೆ ಒಂದು ನಿಲುವಳಿ ಸೂಚನೆಯನ್ನು ಕೊಟ್ಟರು. ಈಗಾಗಲೇ ಚರ್ಚಿತವಾಗಿರುವಂಥ ವಿಷಯವನ್ನು ಉಪಾಧಿವೇಶನದಲ್ಲಿ ತಾವು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆಂಬ ಕಾರಣಕ್ಕಾಗಿ, ನಾವು ತಾಂತ್ರಿಕವಾದಂಥ, ಕಾನೂನಾತ್ಮಕವಾದ ಆಕ್ಷೇಪಣೆಯನ್ನು ಎತ್ತಿದ ಮೇಲೆ, ತಾವು ಅದನ್ನು ನಿಯಮ 69 ಕ್ಕೆ ಪರಿವರ್ತನೆಗೊಳಿಸಿ, ಅದರಲ್ಲಿ ಎಲ್ಲಾ ಸದಸ್ಯರು ಭಾಗವಹಿಸುವುದಕ್ಕೆ ಸಾಧ್ಯತೆ ಇದೆ, ಆಗಲಿ ಇನ್ನೊಂದು ಬಾರಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆಯೆಂಬ ರೀತಿಯಲ್ಲಿ ತಾವು ಅದನ್ನು ನಿಯಮ 69 ಕ್ಕೆ ಪರಿವರ್ತನೆ ಮಾಡಿದಿರಿ. ಅದಕ್ಕೆ ಆಗಬಹುದು, ಕೊನೆಯ ದಿವಸ ಚರ್ಚೆಗೆ ನಾವೂ ಕೂಡ ಸಮ್ಮತಿಸಿದ್ದೇವೆ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ತಯಾರಾಗಿದ್ದೇವೆಂದು ಹೇಳಿದ್ದೇವೆ.

ಅದೇ ರೀತಿಯಾಗಿ ಇವತ್ತು ಕಾರ್ಯಕಲಾಪಗಳ ಪಟ್ಟಿಯಲ್ಲಿ ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆಗೆ ತಾವು ಅವಕಾಶವನ್ನು ಕೊಟ್ಟಿದ್ದೀರಿ. ಇಲ್ಲಿ ನಾವು ಈ ಚರ್ಚೆಗೆ ಹಿಂದೆ ಸರಿಯುತ್ತಿದ್ದೇವೆನ್ನುವುದಕ್ಕಿಂತಲೂ ಹೆಚ್ಚಾಗಿ ಇದಕ್ಕೆ ನಾವು ಬಹಳ ದೊಡ್ಡ ಮಹತ್ವವನ್ನು ಕೊಟ್ಟಿದ್ದೇವೆ. ಅದರಲ್ಲಿ ವಿರೋಧಪಕ್ಷದ ನಾಯಕರು ಮತ್ತು ಹಿರಿಯ ಸದಸ್ಯರು ಕೊಟ್ಟಿರುವಂಥ ಈ ವಿಷಯಕ್ಕೆ ಸಂಪೂರ್ಣವಾದ ಗೌರವವನ್ನು ಕೊಡುವುದಕ್ಕೆ ನಾವು ತಯಾರಿದ್ದೇವೆ. ನಾವು ಚರ್ಚೆಗೂ ಸಹ ತಯಾರಿದ್ದೇವೆ, ನಾವು ಕೇಂದ್ರ ಸರ್ಕಾರದ ಮೇಲೆ ಪ್ರಭಾವ ಬೀರುವುದಕ್ಕಾಗಿ ಅವರ ಸಹಕಾರವನ್ನು ಸಹ ಬಯಸುತ್ತೇವೆ. ಆದರೆ ಇಂದು ಅಧಿವೇಶನದ ಕೊನೆಯ ದಿನವಾಗಿದೆ. ಇಲ್ಲಿ ಇನ್ನು ಹತ್ತು ವಿಧೇಯಕಗಳನ್ನು ನಾವು pass ಮಾಡಿಕೊಳ್ಳುವಂಥಾದ್ದು ಇದೆ. ಅನೇಕ ಸಂದರ್ಭಗಳಲ್ಲಿ ವಿಧೇಯಕಗಳು ಸದನದ ಮುಂದೆ ಬಂದಾಗ ಒಂದಲ್ಲ, ಒಂದು ಕಾರಣದ ಮೂಲಕವಾಗಿ ಬೇರೆ ಬೇರೆ ವಿಷಯಗಳು ಚರ್ಚೆಗೆ ಬಂದಿದ್ದರಿಂದ ಆ ಕಾರಣಕ್ಕಾಗಿಯೇ ವಿಧೇಯಕಗಳು ಚರ್ಚೆಯಾಗಿಲ್ಲ.

ನಿನ್ನೆ ಸುಮಾರು 5 ವಿಧೇಯಕಗಳನ್ನು ಇಲ್ಲಿ ಪಾಸ್ ಮಾಡಿದ್ದನ್ನು ವಿಧಾನ ಪರಿಷತ್ತಿಗೆ ತೆಗೆದುಕೊಂಡು ಹೋಗಿದ್ದೇವೆ. ಅಲ್ಲೂ ಕೆಲವು ವಿಧೇಯಕಗಳು ಪಾಸ್ ಆಗಿವೆ. ಅಲ್ಲಿ ಈಗ ವಿಧೇಯಕಗಳು ಚರ್ಚೆಗೆ ಇಲ್ಲ, ಅಲ್ಲಿ ಕಾರ್ಯಕಲಾಪಗಳ

ಪಟ್ಟಿಯಲ್ಲಿ ವಿಧೇಯಕಗಳು ಬರುತ್ತವೆಂದು ಕಾಯುತ್ತಿದ್ದಾರೆ. ಇಲ್ಲಿ ಹತ್ತು ವಿಧೇಯಕಗಳನ್ನು ಈ ದಿವಸ ತೆಗೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಇದರಲ್ಲಿ ಅತ್ಯಂತ ಮಹತ್ವದ ವಿಧೇಯಕಗಳು ಯಾವುವು ಎಂದು ಮೂರು, ನಾಲ್ಕು ವಿಧೇಯಕಗಳನ್ನು ನನ್ನ ಸಚಿವ ಸಹದ್ಯೋಗಿಗಳೊಂದಿಗೆ ಮಾತನಾಡಿ, ಮಾನ್ಯ ಸಭಾಧ್ಯಕ್ಷರೆ, ತಮಗೆ ಈ ಕೂಡಲೇ ಕೊಡುತ್ತಿದ್ದೇನೆ. ಈ ವಿಧೇಯಕಗಳು ಆದಮೇಲೆ, ಎಷ್ಟು ಹೊತ್ತು ಆದರೂ ಆಗಲಿ, ತಾವು ಬರಗಾಲದ ಬಗ್ಗೆ ಪ್ರಾಶಸ್ತ್ಯವನ್ನು ಕೊಡುವುದಾದರೆ ಅದಕ್ಕೆ ಕೊಡಿ, ಅಥವಾ ಈಗ ಅವರು ನಿಯಮ 60 ರ ಕೆಳಗೆ ಇಸ್ಕಾನ್ ಬಗ್ಗೆ ಹೇಳಿದ್ದಾರೆ. ಆ preliminary submission ಅನ್ನು ತಾವು ನಿಯಮ 69 ಕ್ಕೆ ಅದನ್ನು ತಾವು ಪರಿವರ್ತನೆ ಮಾಡಿದ್ದೀರಿ. ಮೊದಲನೆಯದಾಗಿರುವಂಥಾ ನಿಯಮ 69 ರ ಕೆಳಗೆ .....

ಶ್ರೀ ಹೆಚ್.ಡಿ. ಬಸವರಾಜು :- ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಪ್ರಸ್ತಾವನೆಯನ್ನು ಬಿಟ್ಟು ಬಿಟ್ಟಿದ್ದೀರಿ.

ಅಧ್ಯಕ್ಷರು :- ತಮಗೂ ಅವಕಾಶವನ್ನು ಕೊಡುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜು :- ಮಾನ್ಯ ಎಂ.ಪಿ. ಪ್ರಕಾಶ್‌ರವರೆ, ನಿಯಮ 69 ರ ಕೆಳಗೆ ಇರುವ ನಮ್ಮ ಪ್ರಸ್ತಾವನೆಯನ್ನು ಸೇರಿಸಿ. ನಮಗೆ ಸಮಾಧಾನವಾಗುತ್ತದೆ, ಏಕೆಂದರೆ ತಾವು ಈ ಬರಗಾಲ ಮತ್ತು ಇಸ್ಕಾನ್ ವಿಷಯಗಳಿಗೆ ಹೋಗಿದ್ದೀರಿ, ಇವುಗಳ ಮಧ್ಯೆ ನಾವು ಇದ್ದೇವೆ, ಅದನ್ನು ಸೇರಿಸಿ, ಅವಕಾಶ ಬರಲಿ, ಏಕೆಂದರೆ ತಮ್ಮಿಂದ ಒಂದು ಪ್ರಸ್ತಾವನೆ ಅಧ್ಯಕ್ಷರಿಗೆ ಹೋಯಿತೆಂದು ಆಗಬೇಕು.

(ಗೊಂದಲ)

ಅಧ್ಯಕ್ಷರು :- ನಿಮಗೂ ಅವಕಾಶ ಕೊಡುತ್ತೇನೆ. ಏಕೆ ಹೀಗೆ? ಗಲಾಟೆ ಮಾಡಬೇಡಿ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ :- ಮೊದಲು ವಿಧೇಯಕಗಳು ಆಗಲಿ, ಆಮೇಲೆ ಇದನ್ನು ಇಟ್ಟುಕೊಳ್ಳೋಣ. ದಯಮಾಡಿ ಮಾನ್ಯ ಹೆಚ್.ಡಿ. ಬಸವರಾಜುರವರೆ, ಸಹಕಾರ ಕೊಡಿ. ತಾವು ಯಾರು ಹೊರಗಡೆ ಹೋಗಿಯೆಂದು ಅಲ್ಲ. ಇವತ್ತು ಎಷ್ಟು ಹೊತ್ತು ಆದರೂ ಕೂಡ, ಎಲ್ಲರ ವಿಚಾರಗಳು ಚರ್ಚೆಯಾಗಲಿ, ವಿಧಾನ

ಪರಿಷತ್ತಿನಲ್ಲಿ ವಿಧೇಯಕಗಳು ಇಲ್ಲದೇ ಕಾರ್ಯಕಲಾಪಗಳು ಇಲ್ಲ. ಆದುದರಿಂದ ತಾವು ದಯವಿಟ್ಟು ಅರ್ಥಮಾಡಿಕೊಂಡು ಸಹಕಾರ ಕೊಡಿ. ಇವತ್ತು ಎಷ್ಟು ಹೊತ್ತಾದರೂ ಸರ್ಕಾರ ಕುಳಿತುಕೊಂಡು ತಮ್ಮ ಪ್ರಶ್ನೆಗಳಿಗೆ ಉತ್ತರ ಕೊಡುತ್ತದೆ.

ಶ್ರೀ ಹೆಚ್.ಡಿ. ಬಸವರಾಜು :– ಮಾನ್ಯ ಅಧ್ಯಕ್ಷರೆ, ನಾವು 5 ನಿಮಿಷಗಳಲ್ಲಿ ಪ್ರಸ್ತಾವನೆಯನ್ನು ಮಾಡಿ ಬಿಡುತ್ತೇವೆ. ಅದಕ್ಕೆ ಮಾತ್ರ ಅವಕಾಶವನ್ನು ಕೊಡಿ.

ಅಧ್ಯಕ್ಷರು :– ಕೊಡುತ್ತೇವೆ. ತಾವು ಕುಳಿತುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಗೃಹ ಸಚಿವರನ್ನು ಕೇಳುತ್ತೇನೆ. ತಾವು ಸ್ವಲ್ಪ ಗಮನ ಕೊಡಬೇಕು, ಮತ್ತು ಈ ಸದನ ಬಿಸಿನೆಸ್ ಬಗ್ಗೆಯೂ ಕೂಡ ನಾವೆಲ್ಲರೂ serious ಇಲ್ಲ. ಈಗ ಸದನದಲ್ಲಿ ಬರಗಾಲದ ಬಗ್ಗೆ ಚರ್ಚೆ ಇದೆ. ಬೇರೆ ಬೇರೆ ವಿಷಯಗಳು ಇವೆ, ಬಿಲ್‌ಗಳು ಇವೆ. ಇಂಥ ಸಂದರ್ಭದಲ್ಲಿ ಅರ್ಥ ಸಚಿವರು ಸದನ ನಡೆಯುವಾಗ ಇರಬೇಕೋ, ಬೇಡವೋ ಎಂಬುದನ್ನು ತಾವು ಹೇಳಿ. ಎರಡನೆಯದಾಗಿ, ಸದನ ನಡೆಯುವಾಗ ಸದನದ ಹೊರಗಡೆ ಅನೇಕ ಆಶ್ವಾಸನೆಗಳನ್ನು ಕೊಡುವಂಥದ್ದು, ಮತ್ತು ವಿಕಾಸಯಾತ್ರೆಯನ್ನು ಮಾಡಿಕೊಂಡು ತಮಗೆ ಬಂದದ್ದನ್ನು promise ಮಾಡಿರುವಂಥಾದ್ದು. ಇದು ಕಾನೂನು ಬದ್ಧವಾಗಿ ಇದೆಯೆಂದು ನೀವು ಹೇಳಿದರೆ, ನಾವು ಏನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಒಂದು ಕಡೆ ಇದಕ್ಕೆ ಯಾರು ಹಣ ಕೊಡಬೇಕು? ಅಥವಾ ಇದಕ್ಕೆ ಯಾರು ಸ್ಪಂದಿಸಬೇಕು? ಅವರೇ ಸದನದಲ್ಲಿ ಇಲ್ಲ. ಎರಡನೆಯದು ಏನೆಂದರೆ, ನೀವು ಚರ್ಚೆ ಮಾಡಿ, ರಾತ್ರಿ ಎಷ್ಟು ಹೊತ್ತಾದರೂ ಎಂದು. ಚರ್ಚೆ ಮಾಡಬಹುದು, ಅಂತಿಮವಾಗಿ ಹಣವನ್ನು ಬಿಡುಗಡೆ ಮಾಡುವವರು ಯಾರು?

ಶ್ರೀ ಎಂ.ಪಿ. ಪ್ರಕಾಶ್ :– ಸರ್ಕಾರ.....

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಸರ್ಕಾರ ಎಂದು ಗೊತ್ತು. ತಾವು ಯಾರ ಬಳಿ ಹೋಗಿ ಕೇಳುತ್ತೀರಿ? ಅನೇಕ ಸಾರಿ ನಮ್ಮ ಮುಂದೆ ಹೇಳಿದ್ದೀರಿ. ಇದನ್ನು ಅರ್ಥ ಸಚಿವರ ಜೊತೆಯಲ್ಲಿ ಮಾತನಾಡಿ ಬಿಡುಗಡೆ ಮಾಡುತ್ತೇವೆಂದು, ಅವರನ್ನು ಕೇಳಿ ಮಾಡುತ್ತೇವೆಂದು, ತಾವೇ CRF ನಲ್ಲಿ ಇಲ್ಲ, NCCF ನಲ್ಲಿ ಇಲ್ಲವೆಂದು ಹೇಳಿದ್ದೀರಿ. CRF ನಲ್ಲಿ ಇಲ್ಲವೆಂದರೆ, NCCF ನಲ್ಲಿ ಇಲ್ಲವೆಂದರೆ, Non CRF Fund ಅನ್ನು Provide ಮಾಡಿಕೊಂಡು ಕೊಡಯತ್ತೇವೆಂದು, ಇವೆಲ್ಲವನ್ನು ಮಾಡಬೇಕಾದರೂ ಅರ್ಥ ಸಚಿವರು ಸದನದಲ್ಲಿ ಇರಬೇಡವೇ? ಇಷ್ಟು ದಿವಸ

ಅವರು ಸದನಕ್ಕೆ ಬರದಿದ್ದರೆ ಹೇಗೆ? ಏನೋ ಒಂದು ದಿವಸ exception, permission ತೆಗೆದುಕೊಂಡು 9 ನೇ ತಾರೀಖಿನಂದು ಹೋಗಿದ್ದಾರೆಂದರೆ, alright, 10 ನೇ ತಾರೀಖು ಆಯಿತು. ಈಗ 11 ನೇ ತಾರೀಖು, 12 ತಾರೀಖು, ಹೀಗೆ ಎರಡು ಮೂರು ದಿವಸ ಗೈರುಹಾಜರಾದರೆ ಈ ಮನೆಗೆ ಗೌರವವೇ ಇಲ್ಲವಾ? ಅಥವಾ ಇದರ ಬಗ್ಗೆ ಚಿಂತನೆ ಇಲ್ಲವಾ? ಇದರ ಅರ್ಥ ಏನು? ಅಂದರೆ ಪಕ್ಷವನ್ನು ಬೆಳೆಸುವುದಕ್ಕೋಸ್ಕರ, ಈ ಸದನವನ್ನು ಉಪಯೋಗ ಮಾಡಿಕೊಳ್ಳುತ್ತಿದ್ದೀರೋ, ಸರ್ಕಾರದ ದುರುಪಯೋಗವೋ ಹೇಗೆ? ಎಲ್ಲರೂ ಪಕ್ಷದ ಕೆಲಸವನ್ನು ಮಾಡುತ್ತಾರೆ.

ಆದರೆ ಈ ಕೆಲಸವನ್ನು ಮಾಡಿ ಪೂರೈಸಿ, ನಿಮಗೆ ಏನು ಜವಾಬ್ದಾರಿಯನ್ನು ಕೊಟ್ಟಿದ್ದಾರೋ, ಅದನ್ನು ಪೂರೈಸಿದ ಮೇಲೆ, ನಿಮ್ಮ ಪಕ್ಷದ ಕೆಲಸವನ್ನು ಮಾಡಿಕೊಂಡು ಇಡೀ ತಿಂಗಳು ನೀವು ಅಡ್ಡಾಡಿ, ಬೇಡವೆನ್ನುವುದಿಲ್ಲ, ಅಥವಾ 13 ನೇ ತಾರೀಖಿನ ನಂತರ ನೀವು free ಇರುತ್ತೀರಿ. ನೀವು ಎಷ್ಟು ಬೇಕೋ ಅಷ್ಟು ಅಡ್ಡಾಡಿ, ಆದರೆ ಅದನ್ನು ಬಿಟ್ಟು ಸದನ ನಡೆಯುವಾಗ, ಹೊರಗಡೆ ಹೇಳುವಂಥಾದ್ದು ಒಂದು, ಇಲ್ಲಿ ಸದನದಲ್ಲಿ ಇಲ್ಲದೇ ಇರುವಂಥಾದ್ದು ಒಂದು, ಈ ರೀತಿಯಾದರೆ ನಮ್ಮ ಚರ್ಚೆಗೆ ಏನು seriousness ಬರುತ್ತದೆ? ನಾವು ಯಾರ ಮುಂದೆ ಹೇಳಬೇಕು? ಏಕೆ ನಾವು ಬರಬೇಕು, ನಾವು ಏಕೆ ಚರ್ಚೆಗೆ ತೆಗೆದುಕೊಳ್ಳಬೇಕು? ಕುಡಿಯುವ ನೀರಿಗೂ ಸಹಿತ ಹಣ ಬಿಡುಗಡೆ ಮಾಡಿಲ್ಲ. ನಾವೆಲ್ಲ ಕೇಳಿದ ತಕ್ಷಣವೇ 50 ಕೋಟಿ ರೂಪಾಯಿಗಳನ್ನು ಇವತ್ತು ಬಿಡುಗಡೆ ಮಾಡಿಸುವುದಕ್ಕೆ ಹೇಳುತ್ತೇನೆ, ಇನ್ನು 50 ಕೋಟಿ ಎಂದು ಹೇಳಿದರು. ಅದರ G.O. ಇನ್ನೂ issue ಆಗಿಲ್ಲ. ಆ ಮಾತು ಬೇರೆ, ಅಂದರೆ ಯಾವುದು ನಿಮ್ಮ ಕೈಯಲ್ಲಿ ಇಲ್ಲ, ಇದನ್ನು ನೀವು promise ಮಾಡುತ್ತೀರಿ. ಇನ್ನೊಬ್ಬರು ಅದಕ್ಕೆ ಮಾನ್ಯತೆ ಕೊಡುವುದಿಲ್ಲ. ಅದಕ್ಕೆ ಅವರು ಇಲ್ಲಿ ಬಂದು ಉತ್ತರ ಕೊಡಲಿ, ಇಲ್ಲವೆಂದರೆ House adjourn ಮಾಡಿ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ಸ್ಪಷ್ಟೀಕರಣ ಮಾಡುತ್ತೇನೆ. ನಿನ್ನೆ ಕೂಡ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದರು. ಅವತ್ತು B.A.C meeting ಇದ್ದಾಗ ವಿಕಾಸಯಾತ್ರೆಯ ವಿಷಯವೂ ಪ್ರಸ್ತಾಪವಾಯಿತು. ಆಗ ಈ ವಿಚಾರ discussion ಆಯಿತು. ಮಾನ್ಯ ಬಿ.ಎಸ್. ಯಡಿಯೂರಪ್ಪನವರು, ಉಪ ಮುಖ್ಯಮಂತ್ರಿಯವರು ಹೇಳಿದರು. ನಾನು 13 ನೇ ತಾರೀಖಿನವರೆಗೂ ವಿಕಾಸಯಾತ್ರೆಯಲ್ಲಿ ಇರುತ್ತೇನೆ. ಈ ಬದಲಾವಣೆ ಮಾಡಿ ಎನ್ನುವಂಥಾದ್ದು ಅಲ್ಲ, ಅವತ್ತು B.A.C. meeting ನಲ್ಲಿ ಹೇಳಿದರು, ಹೇಳಿದ

ಮೇಲೆ 11 ನೇ ತಾರೀಖಿನವರೆಗೆ ಮುಖ್ಯಮಂತ್ರಿಗಳು ಇರುತ್ತಾರೆ. ಅವತ್ತು ತಾವು ಹೇಳಿದ್ದೀರಿ, 11 ನೇ ತಾರೀಖು ತಾವು ಹೆಚ್ಚಿನ ಬಜೆಟ್‌ನ ಬಗ್ಗೆ ಉತ್ತರದಲ್ಲಿ ಏನು ಪ್ರಸ್ತಾಪ ಮಾಡಿದ್ದೀರಿ. ಅದಕ್ಕೆ ನಾವು ಹಕ್ಕುಚ್ಯುತಿಯನ್ನು ಮಂಡನೆ ಮಾಡುತ್ತಿದ್ದೇವೆ, 11 ನೇ ತಾರೀಖಿಗೆ ಬಂದು ಹೋಗಿ ಎಂದು ಹೇಳಿದ್ದೀರಿ. ಅವರಿಗೆ ಪೂರ್ವ ನಿಗದಿತವಾದ ಕಾರ್ಯಕ್ರಮ ಇತ್ತು. ಅದಕ್ಕೆ ಅವರು ಬರುವುದಕ್ಕೆ in conveninent ಆಗುತ್ತದೋ ಏನೋ ಎನ್ನುವಂಥ ಮಾತನ್ನು ಹೇಳಿದರು. ಅವತ್ತು B.A.C meeting ನಲ್ಲೂ ಒಪ್ಪಿಕೊಂಡರು. ಇವತ್ತು ಈ ರೀತಿ ತಕರಾರು ಮಾಡುವಂಥಾದ್ದು ಸರಿಯಲ್ಲ.

ಶ್ರೀ ಸಿದ್ಧರಾಮಯ್ಯ :– ನಾವು ಒಪ್ಪಿಕೊಂಡಿದ್ದೆವಾ.....

ಶ್ರೀ ಜಗದೀಶ್ ಶೆಟ್ಟರ್ :– ಆವತ್ತು B.A.C meeting ನಲ್ಲಿ ಒಪ್ಪಿಕೊಂಡರು. ಈಗ ಈ ರೀತಿ ತಕರಾರು ಮಾಡುವಂಥಾದ್ದು ಸರಿಯಲ್ಲ.

ಶ್ರೀ ಧರ್ಮಸಿಂಗ್ :– ಯಾವು ಒಪ್ಪಿಕೊಂಡಿದ್ದರು?

ಶ್ರೀ ಸಿದ್ಧರಾಮಯ್ಯ :– ನಾವೇನು ಒಪ್ಪಿಕೊಂಡಿದ್ದೇವೆಯೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :– 11 ನೇ ತಾರೀಖು ಬಂದು ಹೋಗಿ ಎಂದು ನೀವು ಹೇಳಿದಿರಿ. 13 ನೇ ತಾರೀಖಿನವರೆಗೆ ವಿಕಾಸ ಯಾತ್ರೆ ಇದೆ ಎಂದು ಅವರು ಹೇಳಿದರು. 11 ನೇ ತಾರೀಖಿನಂದು ಹಕ್ಕುಚ್ಯುತಿ ತೆಗೆದುಕೊಂಡು ಬರುತ್ತಿದ್ದೇವೆ, ಆವತ್ತೊಂದು ದಿವಸ ಬಂದು ಹೋಗಿ ಎಂದು ನೀವು ಹೇಳಿದಿರಿ.

(ಗೊಂದಲ)

ಅಧ್ಯಕ್ಷರು :– ಆಯಿತು. ಸರ್ಕಾರದ ಪರವಾಗಿ ಸಂಸದೀಯ ಸಚಿವರಿದ್ದಾರೆ, ಅವರು ಉತ್ತರ ಕೊಡುತ್ತಾರೆ. ಅದು Joint responsibility ಆದ್ದರಿಂದ, ಈಗ ವಿಷಯಕ್ಕೆ ಬರೋಣ.

ಶ್ರೀ ಸಿದ್ಧರಾಮಯ್ಯ :– House ಕರೆದಿದ್ದು, ಇಲ್ಲಿ ಬರಗಾಲದ ಬಗ್ಗೆ ಚರ್ಚೆ ಮಾಡಬೇಕೆಂದಾಗ ನೀವು ಪಕ್ಷದ ಕೆಲಸ ಮಾಡಿಕೊಂಡು ಇರಬಹುದೇ?

ಶ್ರೀ ಜಗದೀಶ್ ಶೆಟ್ಟರ್ :– ಬರಗಾಲದ ಬಗ್ಗೆ ಚರ್ಚೆ ಮಾಡೋಣ. ಇಲ್ಲಿ ಮಾನ್ಯ ಎಂ.ಪಿ. ಪ್ರಕಾಶ್‌ರವರಿದ್ದಾರೆ, ಕಂದಾಯ ಸಚಿವನಾಗಿ ನಾನಿದ್ದೇನೆ. ಏನು

ಮಾಡಬೇಕೋ ಅದರ ಬಗ್ಗೆ ಸರ್ಕಾರದವರಾದ ನಾವು ನಿರ್ಣಯ ತೆಗೆದುಕೊಂಡು ಮಾಡುತ್ತೇವೆ. ಈ ಅಧಿವೇಶನದಲ್ಲಿ ಬರಗಾಲದ ಬಗ್ಗೆ ಚರ್ಚೆಯಾಗಿದೆ, ಮತ್ತೆ ನೀವು ಚರ್ಚೆ ಮಾಡಬೇಕೆಂದು ಹೇಳುತ್ತಿದ್ದೀರಿ, ನೀವು ಚರ್ಚೆ ಮಾಡಿ, ಉತ್ತರ ಕೊಡಲಿಕ್ಕೆ ನಾವು ತಯಾರಿದ್ದೇವೆ.

ಶ್ರೀ ಸಿದ್ಧರಾಮಯ್ಯ :– ಬರೀ ತಯಾರಾಗಿದ್ದೀರಿ ಅಷ್ಟೇ. ದುಡ್ಡು ಬೇಕು ಎಂದರೆ ಹಣಕಾಸಿನ ಮಂತ್ರಿಗಳಿಲ್ಲ ಎಂದು ಹೇಳುತ್ತೀರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :– ಈಗಾಗಲೇ ನಾವು ಹಣ ಬಿಡುಗಡೆ ಮಾಡಿದ್ದೇವೆ. ಇದುವೆಗೆ ಕೇಂದ್ರ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ? 74 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ ಎಂದು ಅವರು ಹೇಳಿದರೂ, ಇದುವರೆಗೆ ಬಿಡುಗಡೆ ಮಾಡಲಿಲ್ಲ.

(ಗೊಂದಲ)

ಶ್ರೀ ಸಿದ್ಧರಾಮಯ್ಯ :– ಆಯಿತು, ಅವರು ಮಾಡಿದ್ದಾರೆ. ಕೇಂದ್ರ ಸರ್ಕಾರದವರು ಕೊಟ್ಟಂಥ ಹಣವನ್ನೇ ಇನ್ನು ನೀವು ಬಿಡುಗಡೆ ಮಾಡಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :– ಕೇಂದ್ರದವರು ಇದುವರೆಗೂ foodgrains ಕೊಟ್ಟಿಲ್ಲ. ಅದರ ಬಗ್ಗೆ ನೀವು fight ಮಾಡಿದಿರೇನು? ನೀವು ಏನಾದರೂ ಪ್ರಯತ್ನ ಮಾಡಿದಿರೇನು ?

ಶ್ರೀ ಧರ್ಮಸಿಂಗ್ :– ಕೇಂದ್ರದಿಂದ ಬಂದಂಥ ಹಣವನ್ನು ಕೂಡ ನೀವು ಬಿಡುಗಡೆ ಮಾಡಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :– 5 ಲಕ್ಷದ 74 ಸಾವಿರ ಮೆಟ್ರಿಕ್ ಟನ್ food grains ಬಿಡುಗಡೆ ಮಾಡಬೇಕೆಂದು ನಾವು ಕೇಳಿದ್ದೇವೆ. ಅದು ಇದುವರೆಗೂ ಬಿಡುಗಡೆಯಾಗಲಿಲ್ಲ. ಹಣ ಬಿಡುಗಡೆ ಮಾಡಿ ಎಂದು ಕೇಳಿದೆವು. ಇದುವರೆಗೂ ಅದು ಬಿಡುಗಡೆಯಾಗಲಿಲ್ಲ. ಇವತ್ತು ನಮ್ಮ ಖಜಾನೆಯಿಂದ 120 ಕೋಟಿ ರೂಪಾಯಿ ಹಣ ಬಿಡುಗಡೆಯಾಗಿದೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ :- ಬರಗಾಲದ ಬಗ್ಗೆ ಕಳೆದ ಫೆಬ್ರುವರಿಯಲ್ಲಿ ಚರ್ಚೆಯಾಯಿತು. Governor Address ಗಾಗಿ ಸದನವನ್ನು ಕರೆದಾಗ ಚರ್ಚೆಯಾಯಿತು. ಅದಾದ ಮೇಲೆ ಇವರು ಉತ್ತರ ಕೊಟ್ಟರು. ಅಲ್ಲಿಂದೀಚೆಗೆ ಇರುವ ಕುಡಿಯುವ ನೀರಿಗಾಗಿ ಒಂದು ರೂಪಾಯಿಯನ್ನೂ ಬಿಡುಗಡೆ ಮಾಡಿಲ್ಲ. ಎಷ್ಟು ಹಣ ಬಿಡುಗಡೆ ಮಾಡಿದ್ದಾರೆ, ಎಲ್ಲೆಲ್ಲಿಗೆ ಹೋಗಿದ್ದಾರೆ ಎನ್ನುವ ಬಗ್ಗೆ ಉತ್ತರ ಕೊಡಿ ನೋಡೋಣ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಉಪ ಮುಖ್ಯಮಂತ್ರಿಗಳು ಬರದ ಸಂಬಂಧ, ಕುಡಿಯುವ ನೀರಿನ ಸಂಬಂಧ ಯಾವಾಗಲೇ ಆಗಲೀ ಹಣ ಬಿಡುಗಡೆಗೆ ತೊಂದರೆ ಮಾಡಿಲ್ಲ. Finance Department ನಲ್ಲಿ ಯಾವಾಗಲೂ ತೊಂದರೆಯಾಗಿಲ್ಲ. ಬರಗಾಲ ಕಾಮಗಾರಿಗೆ ಹಣ ಬೇಕೆಂದಿರಿ, ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ :- ಕುಡಿಯುವ ನೀರಿಗೆ ಮೂರು ಕಾಸಿನ ಕೆಲಸವನ್ನೂ ಮಾಡಿಲ್ಲ ಇವರು. ಕುಡಿಯುವ ನೀರಿಗೆ 50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದನ್ನು ಬಿಟ್ಟರೆ Task Force ಗಳಿಗೆ ಒಂದು ರೂಪಾಯಿಯನ್ನೂ ಕೊಟ್ಟಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :- ಈಗ ನೀವು ಚರ್ಚೆ ಮಾಡಿ. ಹಣವನ್ನು ಸರ್ಕಾರ ಬಿಡುಗಡೆ ಮಾಡುತ್ತದೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ಏಕೆ ಹೀಗೆ ಇಬ್ಬರೂ ಮಾತನಾಡುತ್ತಿದ್ದೀರಿ. ಒಬ್ಬರು ಕುಳಿತುಕೊಳ್ಳಿ. ಇದೇನು ಅಸೆಂಬ್ಲಿಯೇ?

ಶ್ರೀ ಜಗದೀಶ್ ಶೆಟ್ಟರ್ :- ನಾವು ಮಾತನಾಡುವಾಗ ನೀವು ಎದ್ದು ನಿಲ್ಲುತ್ತೀರಲ್ಲ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :– ಜಗದೀಶ್ ಶೆಟ್ಟರ್‌ರವರು ಮಾತನಾಡುತ್ತಿದ್ದಾರೆ. ಎರಡು ನಿಮಿಷ ಮಾತನಾಡಲು ಬಿಡಿ ಅವರಿಗೆ.

ಶ್ರೀ ಜಗದೀಶ್ ಶೆಟ್ಟರ್ :– ನಾನು ಸ್ಪಷ್ಟೀಕರಣ ಮಾಡುವುದಕ್ಕೆ ನಿಂತಿದ್ದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :– ನಾನು ಸ್ಪಷ್ಟೀಕರಣ ನೀಡುತ್ತಿದ್ದೆ. ನೀವು record verify ಮಾಡಿ. B.A.C. meeting ಸೇರಿದಂಥ ಸಂದರ್ಭದಲ್ಲಿ, ಯಾವ ದಿನದವರೆಗೆ ಈ ಅಧಿವೇಶನವನ್ನು ಮುಂದಕ್ಕೆ ಹಾಕಬೇಕು ಎನ್ನುವಂಥಾದ್ದು ಚರ್ಚೆ ನಡೆಯುವ ಸಂದರ್ಭದಲ್ಲಿ ಮೊದಲು 9, 10 ರವರೆಗೆ ಎಂದು ಆಯಿತು. ನಂತರ ಅದು ಆಗುವುದಿಲ್ಲ ಎಂದು ಆದಾಗ 10, 11, 12, 13 ರವರೆಗೂ ನಡೆಸುವುದು ಎಂದು ಆಯಿತು. ಆವತ್ತು ಉಪ ಮುಖ್ಯಮಂತ್ರಿಗಳು ಹೇಳಿದರು, ನಾನು ವಿಕಾಸ ಯಾತ್ರೆಗೆ ಹೋಗಬೇಕಾಗಿದೆ, ಅದಕ್ಕೆ ನನಗೆ.....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :– ಮೊದಲು ನಾನು ಹೇಳುತ್ತೇನೆ. ನಂತರ ನೀವು ಬೇಕಾದುದನ್ನು ಹೇಳಿ. ಸರಿಯೋ, ತಪ್ಪೋ ಎನ್ನುವುದನ್ನು ಹೇಳಿ. ಈಗ ಹೇಳುವ ಹಕ್ಕು ನಮಗಿದೆ. ಬಜೆಟ್‌ಗೆ ಉತ್ತರ ಕೊಡುವಂಥ ಸಂದರ್ಭದಲ್ಲಿ ಏನು ನಡೆದಿದೆ, ಅದಕ್ಕೆ ಸಂಬಂಧಿಸಿದಂತೆ 11 ನೇ ತಾರೀಖು ನಾವು ಹಕ್ಕುಚ್ಯುತಿಯನ್ನು ಮಂಡನೆ ಮಾಡುತ್ತೇವೆ. ಅವತ್ತೊಂದು ದಿವಸ ನೀವು ಬಂದು ಹೋಗಬೇಕು ಎನ್ನುವುದು ಪ್ರಸ್ತಾಪವಾದಾಗ, ಮಾನ್ಯ ಯಡಿಯೂರಪ್ಪನವರು, ನಾನು 11 ನೇ ತಾರೀಖು ಬರುತ್ತೇನೆ, ಆವತ್ತು ಬಂದು ನಾನು ಉತ್ತರ ಕೊಟ್ಟು ಹೋಗುತ್ತೇನೆ ಎನ್ನುವಂಥ ಮಾತನ್ನು ಹೇಳಿದರು. ಇವತ್ತು ಬರದ ವಿಷಯದ ಬಗ್ಗೆ ಚರ್ಚೆ ಮಾಡುವಂಥಾದ್ದು ಇದೆ. ನೀವು ಚರ್ಚೆ ಮಾಡಿ. ಮಾನ್ಯ ಮುಖ್ಯಮಂತ್ರಿಗಳಿದ್ದಾರೆ, Sub Committee ಯ ಅಧ್ಯಕ್ಷರಾದ ಗೃಹ ಮಂತ್ರಿಗಳಿದ್ದಾರೆ, ಕಂದಾಯ ಮಂತ್ರಿಯಾದ ನಾನಿದ್ದೇನೆ, ಹಣ ಬಿಡುಗಡೆ ಮಾಡುವಂಥ ಪ್ರಸಂಗ ಬಂದಾಗ, ಬರದ ಸಮಸ್ಯೆ ಬಂದಾಗ, ಕುಡಿಯುವ ನೀರಿನ ಸಮಸ್ಯೆ ಬಂದಾಗ C.R.F. ಹಣ, N.C.C.F ಹಣ ಎಲ್ಲವನ್ನೂ ನಾವು ಖರ್ಚು ಮಾಡಿರುವಂಥ ಸಂದರ್ಭದಲ್ಲಿ, ಇನ್ನೂ ಹೆಚ್ಚಿನ

ಹಣ ಬೇಕಾಗಿತ್ತು. ಅದು ಕೇಂದ್ರ ಸರ್ಕಾರದಿಂದ ಬರಬೇಕಾಗಿತ್ತು, ಅದೂ ಬರಲಿಲ್ಲ. ಇನ್ನು ಹೆಚ್ಚಿನ ಹಣ ಬೇಕೆಂದರೆ, ನಾವು Finance Department .....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :- ಮೊದಲು ನಾನು ಕಂಪ್ಲೀಟ್ ಮಾಡುತ್ತೇನೆ. ಆಮೇಲೆ ನೀವು ಹೇಳಿ. ನಾನು ಮಾತನಾಡುವುದೇ ಬೇಡವೇ?

ಶ್ರೀ ಧರ್ಮಸಿಂಗ್ :- ಕೇಂದ್ರ ಸರ್ಕಾರದ ಬಗ್ಗೆ ಹೇಳುತ್ತಿದ್ದೀರಿ. ಆದರೆ, ನೀವು ಏನೂ ಬಿಡುಗಡೆ ಮಾಡಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :- ಬಿಡುಗಡೆ ಮಾಡುತ್ತೇವಲ್ಲ, ಮಾಡುತ್ತೇವೆ. ಮಾಡುವ ಜವಾಬ್ದಾರಿ ನನ್ನದಾಗಿದೆ. ಜನರಿಗೆ ಯಾವುದೇ ರೀತಿಯಲ್ಲೂ ತೊಂದರೆಯಾಗದ ರೀತಿಯಲ್ಲಿ ಬರದ ಕಾಮಗಾರಿಯ ಸಲುವಾಗಿ, ಕುಡಿಯುವ ನೀರಿನ ಸಲುವಾಗಿ ಸರ್ಕಾರ ಹಣ ಬಿಡುಗಡೆ ಮಾಡುತ್ತದೆ. ಇದರ ಬಗ್ಗೆ ಯಾವುದೇ ಚಿಂತೆ ಮಾಡುವಂಥಾದ್ದಿಲ್ಲ. ಇವತ್ತು ಎಲ್ಲಿ ಅವಶ್ಯಕತೆ ಇದೆ, ಅಲ್ಲಿಗೆ ತಕ್ಷಣ ಹಣವನ್ನು ಬಿಡುಗಡೆ ಮಾಡುತ್ತೇವೆ. ಈ ವಿಷಯಕ್ಕೆ ಸಂಬಂಧಿಸಿದಂತೆ Finance Department ನವರು ಯಾವಾಗಲೂ ತೊಂದರೆ ಮಾಡಿಲ್ಲ ಎಂದು ಹೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡಬಾರದು. ತಾವೇ ಸಾಕ್ಷಿಯಾಗಿದ್ದೀರಿ. Parliamentary Affairs Minister ಆದ ಪ್ರಕಾಶ್‌ರವರಿದ್ದಾರೆ, ಮಾಧುಸ್ವಾಮಿಯವರಿದ್ದಾರೆ, ಹೆಗ್ಡೆಯವರಿದ್ದಾರೆ, ಶ್ರೀರಾಮರೆಡ್ಡಿಯವರಿದ್ದಾರೆ. ನಾನು ಹೇಳುವುದರಲ್ಲಿ ಏನಾದರೂ ತಪ್ಪಿದ್ದರೆ ನಾನು ಕ್ಷಮೆ ಕೇಳುತ್ತೇನೆ. ಅವರು ಹೇಳತಕ್ಕಂಥ ಮಾತಿನಲ್ಲಿ ಸತ್ಯಾಂಶವಿಲ್ಲವೆಂದರೆ ಅವರು ಈ ಸದನದ ಕ್ಷಮೆ ಕೇಳಬೇಕು. ಅಧ್ಯಕ್ಷರೇ, ತಮ್ಮ ಮುಂದೆಯೇ ತೀರ್ಮಾನವಾಗಿತ್ತು. ಏನೆಂದರೆ 9 ನೇ ತಾರೀಖು ಸದನ ಸೇರುವುದೆಂದು ಆಗಿತ್ತು. ಆದರೆ, 9 ನೇ ತಾರೀಖು ಮುಖ್ಯಮಂತ್ರಿಗಳು ಸದನದಲ್ಲಿ ಇರಲು ಸಾಧ್ಯವಿಲ್ಲ. ಏಕೆಂದರೆ, ಆವತ್ತು Deputy Commissioners and Executive Officers meeting ಇದೆ, ಅದಕ್ಕಾಗಿ 9 ನೇ ತಾರೀಖು ಬೇಡ, 10 ನೇ ತಾರೀಖಿನಿಂದ ಮುಂದುವರೆಸುವುದು ಎಂದು ಆಯಿತು. ಆಗ ಉಪ ಮುಖ್ಯಮಂತ್ರಿಗಳು " 10

ನೇ ತಾರೀಖು ನಾನು ಇರುವುದಿಲ್ಲ, ನಾನು ವಿಕಾಸ ಯಾತ್ರೆಯನ್ನು ಉದ್ಘಾಟನೆ ಮಾಡಿ, ಅದರಲ್ಲಿ participate ಮಾಡಬೇಕಾಗಿದೆ. ಅಲ್ಲಿಂದ ಬಂದ ಮೇಲೆ 11 ನೇ ತಾರೀಖು ಉತ್ತರ ಕೊಡುತ್ತೇನೆ" ಎನ್ನುವಂಥ ಮಾತನ್ನು ಹೇಳಿದರು.

ಅಂದರೆ, ಅವರು permission ತೆಗೆದುಕೊಂಡು ಹೋಗಿದ್ದು 10 ನೇ ತಾರೀಖಿಗೆ ಮಾತ್ರ, 11, 12, 13 ನೇ ತಾರೀಖುಗಳಂದು ನಾನು ಇರುವುದಿಲ್ಲ ಎಂದು ಅವರು ಅಲ್ಲಿ ಹೇಳಿದ್ದೂ ಇಲ್ಲ, ಆ ಪ್ರಸ್ತಾವನೆಯೇ ಬಂದಿಲ್ಲ. ಅದಕ್ಕೆ ತಾವೇ ಸಾಕ್ಷಿಯಾಗಿದ್ದೀರಿ, ನಾವೆಲ್ಲರೂ ಕೂಡ ಸಾಕ್ಷಿಯಾಗಿದ್ದೇವೆ. ಈಗ ಅವರು ಅದನ್ನು ತಿರುಚಿ, ಇಲ್ಲಿ ಸತ್ಯಕ್ಕೆ ದೂರವಾದ ಮಾತನ್ನು ಪ್ರಸ್ತಾಪ ಮಾಡುತ್ತಾರೆ ಎನ್ನುವುದಾದರೆ, ನನ್ನದು ತಪ್ಪಿದ್ದರೆ ನನಗಾದರೂ ಛೀಮಾರಿ ಹಾಕಬೇಕು, ಇಲ್ಲವೇ ಅವರಿಗಾದರೂ ಹಾಕಬೇಕು. I want your decision. ನನ್ನದು ತಪ್ಪಿದ್ದರೆ ನನಗೆ ಛೀಮಾರಿ ಹಾಕಿ, ಇಲ್ಲವೆಂದರೆ ಅವರಿಗೆ ಛೀಮಾರಿ ಹಾಕಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :- B.A.C. meeting ನ proceedings ತೆಗೆದು ನೋಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಜಗದೀಶ್ ಶೆಟ್ಟರ್‌ರವರೇ, ನಾನು ನಿನ್ನೆ ಮಾತನಾಡುವಾಗ ಭಾರಿ ಸ್ಪಷ್ಟವಾಗಿ ಹೇಳಿದ್ದೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :- ನೀವು ಏಕೆ ಸುಳ್ಳು ಹೇಳಬೇಕು? Proceedings ತೆಗೆದು ನೋಡಿ. ನೀವು ತಪ್ಪು ಮಾಹಿತಿ ಕೊಡುವಂಥಾದ್ದು ಸರಿಯಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಜಗದೀಶ್ ಶೆಟ್ಟರ್‌ರವರೇ ಒಂದು ನಿಮಿಷ ಕುಳಿತುಕೊಳ್ಳಿ. ನಿನ್ನೆ ನಾನು ಮಾತನಾಡುವಾಗ ಭಾರಿ ಸ್ಪಷ್ಟವಾಗಿ ಹೇಳಿದ್ದೇನೆ. 9 ನೇ ತಾರೀಖಿನಿಂದ ಮೂರು ದಿವಸ ಅಧಿವೇಶನವನ್ನು ನಡೆಸೋಣ. ಮೂರು ದಿವಸ ಸಮಯ ಬೇಕು, ಬಿಲ್‌ಗಳು pass ಆಗಬೇಕು ಎಂದು ಸರ್ಕಾರದವರು ತಮ್ಮ ಮುಖಾಂತರ B.A.C. meeting ನಲ್ಲಿ ಪ್ರಸ್ತಾವನೆಯನ್ನು ಇಟ್ಟರು. ಆದರೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರೆಂದರೆ, 9 ನೇ ತಾರೀಖು D.C. ಗಳ ಮತ್ತು Executive Officers meeting ಕರೆದಿದ್ದೇನೆ, ಅವತ್ತು ಬೇಡ ಎಂದರು.

ಸರಿ ಎಂದು ಒಪ್ಪಿಕೊಂಡೆವು. 10 ನೇ ತಾರೀಖಿನಿಂದ ನಡೆಸುವುದು ಎಂದಾಗ ಉಪ ಮುಖ್ಯಮಂತ್ರಿಗಳು 10 ನೇ ತಾರೀಖು ನಾನು ಇರುವುದಿಲ್ಲ, ನಾನು ವಿಕಾಸ ಯಾತ್ರೆಗೆ ಹೋಗಬೇಕಾಗಿದೆ ಎಂದು ಹೇಳಿದರು. ಆಗ ವಿರೋಧ ಪಕ್ಷದ ನಾಯಕರು, ನಾವು ನಿಮ್ಮ ವಿರುದ್ಧ privilege motion move ಮಾಡುತ್ತಿದ್ದೇವೆಂದು ಹೇಳಿದರು. 11 ನೇ ತಾರೀಖು move ಮಾಡಿ, ನಾನು ಬಂದು ಉತ್ತರ ಕೊಡುತ್ತೇನೆ ಎಂದು ಹೇಳಿದರು. ಇಷ್ಟೇ ನಡೆದದ್ದು. ಪೂರ್ತಿಯಾಗಿ ನಾನು 13 ರವರೆಗೆ ಬರುವುದಿಲ್ಲ ಎಂದು ಅವರು ಹೇಳಲಿಲ್ಲ, ಅದಕ್ಕೆ ನಾವು B.A.C. ಯಲ್ಲಿ ಒಪ್ಪಿಗೆ ಕೊಟ್ಟಿಲ್ಲ. ಇದು ಆಗಿರತಕ್ಕಂಥಾದ್ದು. ಆದರೆ ಇವತ್ತು ಅದರ ಬಗ್ಗೆ ಸದನದ ದಾರಿ ತಪ್ಪಿಸತಕ್ಕಂಥಾದ್ದು ಸರಿಯಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :- ಸನ್ಮಾನ್ಯ ಅಧ್ಯಕ್ಷರೇ, ದಯವಿಟ್ಟು ಅದರ proceedings ತೆಗೆದು ನೋಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :- ನೀವು ಹೇಳಿದಿರಿ, Bill ಗಳಿವೆ, ಸಂಬಂಧಪಟ್ಟಂಥ ಮಂತ್ರಿಗಳಿರಲಿ, 11 ನೇ ತಾರೀಖು ಒಂದು ದಿವಸ ನೀವು ಬಂದು ಹೋಗಿ ಎಂದು ಹೇಳಿದಿರಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- Proceedings ತೆಗೆದು ನೋಡಿ sir. ನಾವೇನಾದರೂ ಸುಳ್ಳಾಡಿದ್ದರೆ, ನೀವು ಹೇಳುತ್ತಿರೋ ಅದರಂತೆ ನಾವು ನಡೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ :- ಮಾನ್ಯ ಖರ್ಗೆಯವರು ಹೇಳಿದ್ದಾರೆ, ಅವರು ಸುಳ್ಳು ಹೇಳಿದ್ದರೆ ನಿಮ್ಮ ಕ್ಷಮೆ ಕೇಳುತ್ತೇವೆ ಎಂದು ಹೇಳಿದ್ದಾರೆ. ನೀವು ಸುಳ್ಳು ಹೇಳುತ್ತಿದ್ದರೆ ನೀವು ಕ್ಷಮೆ ಕೇಳುವಿರಾ? ಅದಕ್ಕೆ ಒಪ್ಪಿಕೊಳ್ಳುವಿರಾ? ಛೀಮಾರಿ ಹಾಕಿಸಿಕೊಳ್ಳುತ್ತೀರಾ?

(ಗೊಂದಲ)

ಅಧ್ಯಕ್ಷರು :- ಭೀಮಾರಿಯೆಲ್ಲ ಬೇಡ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :- ತಪ್ಪಿದ್ದರೆ ನಾನೂ ಕ್ಷಮೆ ಕೇಳುತ್ತೇನೆ. ಮೊದಲು Proceedings ತೆಗೆದು ನೋಡಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ :- ಅವರು 10 ನೇ ತಾರೀಖಿಗೆ ಮಾತ್ರ permission ಕೇಳಿಕೊಂಡಿದ್ದರೇ ಹೊರತು, ಬೇರೆ ದಿನಗಳಿಗಲ್ಲ. 11 ನೇ ತಾರೀಖು ನಾನು ಬಂದು ಉತ್ತರ ಕೊಡುತ್ತೇನೆ ಎಂದು ಹೇಳಿದ್ದರು. B.J.P. ಅಧ್ಯಕ್ಷರಾದ ರಾಜನಾಥ್‌ಸಿಂಗ್‌ರವರು ಬರುತ್ತಿದ್ದಾರೆ, ಕಾರ್ಯಕ್ರಮದ ಉದ್ಘಾಟನೆ ಇದೆ, ನಾನು ಅಲ್ಲಿ ಇರಲೇಬೇಕು, ಅದಕ್ಕೋಸ್ಕರ 10 ನೇ ತಾರೀಖು ಒಂದು ದಿನ ಬಿಟ್ಟು.....

ಶ್ರೀ ಜಗದೀಶ್ ಶೆಟ್ಟರ್ :- 10 ನೇ ತಾರೀಖು ಅಲ್ಲರೀ. ಉದ್ಘಾಟನೆಯಾದದ್ದು 9 ನೇ ತಾರೀಖು. 13 ನೇ ತಾರೀಖಿನವರೆಗೆ ಅವರು ಕೇಳಿದ್ದರು.

(ಗೊಂದಲ)

ಅಧ್ಯಕ್ಷರು :- ಆಯಿತು ಬಿಡಿ. ಈ ವಿಧೇಯಕವನ್ನು ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಸಿದ್ಧರಾಮಯ್ಯ :- No, no. It is not correct. ಹಾಗಾದರೆ ಬರಗಾಲದ ಬಗ್ಗೆ ಚರ್ಚೆ ತೆಗೆದುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ :- Proceedings ತೆಗೆದು ನೋಡಿ.

ಶ್ರೀ ಸಿದ್ಧರಾಮಯ್ಯ :- ಬರಗಾಲದ ಬಗ್ಗೆ ಚರ್ಚೆಯನ್ನು ಶುರು ಮಾಡಿಸಿ. ಅವರನ್ನೂ ಕರೆಸಿ. ರಾಜ್ಯದ 134 ತಾಲ್ಲೂಕುಗಳಲ್ಲಿ ಬರಗಾಲ ಇಷ್ಟೊಂದು ಭೀಕರವಾಗಿರುವಾಗ, ನಾವು ವಿಕಾಸ ಯಾತ್ರೆ ಮಾಡುತ್ತೇವೆ, ರಾಜಕೀಯ ಮಾಡುತ್ತೇವೆ ಎಂದು ಹೊರಟರೆ ಹೇಗೆ?

ಶ್ರೀ ಧರ್ಮಸಿಂಗ್ :– ಮಾನ್ಯ ಅಧ್ಯಕ್ಷರೇ, ಅಲ್ಲಿ ತಾವೂ ಕೂಡ ಇದ್ದಿರಿ. ನಾವೆಲ್ಲ ಇದ್ದೆವು. ಅಲ್ಲಿ ನಡೆಯದಿರತಕ್ಕಂಥ ವಿಷಯಗಳನ್ನು ಪ್ರಸ್ತಾಪ ಮಾಡಬೇಕು ಎನ್ನುವ ಚಟ ನಮಗಿಲ್ಲ. ನಾವು ಏನು ಹೇಳುತ್ತೇವೆ ಎಂದರೆ, ಈ ಸದನಕ್ಕೆ ಗೌರವವಿದೆ. ನಿನ್ನೆ ನಡೆದ ಕಬ್ಬು ಬೆಳೆಗಾರರ ಸಭೆಗೆ ಕೂಡ ಉಪ ಮುಖ್ಯಮಂತ್ರಿಗಳು ಬರಲಿಲ್ಲ. ಇವತ್ತು ರಾಜ್ಯದಲ್ಲಿ ಎರಡು ಸರ್ಕಾರಗಳಿವೆ. ಯಡಿಯೂರಪ್ಪನವರ ನೇತೃತ್ವದಲ್ಲಿ ಒಂದು ಸರ್ಕಾರವಿದ್ದು, ಅದು ವಿಕಾಸ ಯಾತ್ರೆಗೆ ಹೋಗಿದೆ. ಮತ್ತೊಂದು ಕುಮಾರಸ್ವಾಮಿಯವರ ನೇತೃತ್ವದಲ್ಲಿರುವ ಸರ್ಕಾರ. ಹೀಗೆ ಎರಡು ಸರ್ಕಾರಗಳನ್ನು ನಾವು ಈ ರಾಜ್ಯದಲ್ಲಿ ಮೊಟ್ಟಮೊದಲನೆಯದಾಗಿ ನೋಡುತ್ತಿದ್ದೇವೆ. ಅವರು ಅಲ್ಲಿ ಏನು ಹೇಳಿದ್ದಾರೆ ಎಂದರೆ, Regional imbalance ಅನ್ನು ಸರಿಪಡಿಸಲಿಕ್ಕೆ 32 ಸಾವಿರ ಕೋಟಿ ರೂಪಾಯಿಗಳನ್ನು ಒದಗಿಸುತ್ತೇನೆ ಎಂದು ಹೇಳಿದ್ದಾರೆ. ಬಜೆಟ್‌ನಲ್ಲಿ ಅಳವಡಿಸದೇ ಇರುವಂಥ ವಿಷಯಗಳನ್ನು, ಸದನ ನಡೆಯುತ್ತಿರುವಾಗ ಸದನದ ಹೊರಗಡೆ ಹೇಳಬಹುದೇ? ಇಲ್ಲಿ ಸದನ ನಡೆಯುತ್ತಿದೆ. ಅದು ಹಕ್ಕುಚ್ಯುತಿ ಆಗುವುದಿಲ್ಲವೇ? ಸದನದ ಹಕ್ಕುಚ್ಯುತಿಯಾಗುವ ರೀತಿಯಲ್ಲಿ, 32 ಸಾವಿರ ಕೋಟಿ ರೂಪಾಯಿಗಳನ್ನು ಒದಗಿಸುತ್ತೇನೆ ಎಂದು ಹೇಳಿದ್ದಾರೆ. ಯಾರದಿದು ಬಜೆಟ್? ಬಜೆಟ್‌ನಲ್ಲಿ ಇಲ್ಲಿ 203 ಕೋಟಿ ರೂಪಾಯಿಗಳೆಂದು ಹೇಳಿ, ಅಲ್ಲಿ 217 ಕೋಟಿ ರೂಪಾಯಿಗಳೆಂದು ಹೇಳಿರುವುದಕ್ಕೆ ನಾವು ಹಕ್ಕುಚ್ಯುತಿಯನ್ನು ಮಂಡನೆ ಮಾಡಿದ್ದೇವೆ.

ಗುಲ್ಬರ್ಗದಲ್ಲಿ ಆ ರೀತಿ ಆಗಿರುವುದು ತಮಗೆ ಗೊತ್ತಿದೆ. Reginal imbalance ಇನ್ನೂ ಕೂಡ ಹಣ ಬಿಡುಗಡೆಯಾಗಿಲ್ಲ. ಈಗ ಸದನ ನಡೆಯುತ್ತಿದೆ. ಯಾವ ರಾಜ್ಯದ ಸದನದಲ್ಲಿ ಕೂಡ ಇಂಥ ಅವ್ಯವಹಾರ ನಡೆಯುತ್ತಿಲ್ಲ. ಅದಕ್ಕೇ ನಾವು ಹೇಳುವುದು, ಇವತ್ತು ಬರದ ಬಗ್ಗೆ ಸಮಗ್ರವಾದ ಚರ್ಚೆಯಾಗಬೇಕು. ಕುಡಿಯುವ ನೀರಿನ ಬಗ್ಗೆ ಚರ್ಚೆಯಾಗಬೇಕು. Bill ಗಳು ಇರುತ್ತದೆ, bill ಗಳು ಹೋಗುತ್ತವೆ, ಬರುತ್ತವೆ. ಯಾವ್ಯಾವುದು ನಿಮಗೆ important bill ಇತ್ತು, ಜೈಲಿಗೆ ಹಾಕತಕ್ಕಂಥಾದ್ದನ್ನು pass ಮಾಡಿಕೊಂಡಿದ್ದೀರಿ, ಪಾಸ್ ಮಾಡಿ ಕೊಟ್ಟಿದ್ದೇವೆ. ಇವತ್ತೇನೆಂದರೆ ಬರದ ಬಗ್ಗೆ ಚರ್ಚೆಯಾಗಬೇಕು. ಬರದ ಬಗ್ಗೆ ಚರ್ಚೆಗೆ ಸಾಯಂಕಾಲ 7 ಗಂಟೆಗೆ ಅವಕಾಶ ಕೊಟ್ಟರೆ ಅದಕ್ಕೆ ಅಷ್ಟು ಮಹತ್ವ ಬರುವುದಿಲ್ಲ. ಮೊಟ್ಟ ಮೊದಲನೆಯದಾಗಿ ಕರ್ನಾಟಕ ರಾಜ್ಯದಲ್ಲಿ ಇರುವ ಸಮಸ್ಯೆ, ನೀರಿನ ಸಮಸ್ಯೆ, ಮೇವಿನ ಸಮಸ್ಯೆ, ಕೂಲಿ ಕಾರ್ಮಿಕರಿಗೆ ಏನೂ ಕೆಲಸವಿಲ್ಲ, ಉದ್ಯೋಗ ಭರವಸೆ

ಯೋಜನೆಯಲ್ಲಿ ಎಷ್ಟು ಹಣ ಬಂದಿದೆ, ಎಷ್ಟು ಖರ್ಚು ಮಾಡಿದ್ದೀರಿ, ಎಷ್ಟು ನಿರ್ವಹಣೆ ಮಾಡಿದ್ದೀರಿ, ಎಷ್ಟು review meeting ಮಾಡಿದ್ದೀರೆಂಬುದರ ಬಗ್ಗೆ ಚರ್ಚೆಯಾಗಬೇಕಾಗಿತ್ತು. ಅದರ ಬಗ್ಗೆ ಈಗ ಚರ್ಚೆ ಪ್ರಾರಂಭ ಮಾಡೋಣ.

ಅಧ್ಯಕ್ಷರು :- ಅನೇಕ ಸಾರಿ ಮಂತ್ರಿಗಳು ಸದನದಲ್ಲಿರುವುದಿಲ್ಲ, ಅಥವಾ ಪ್ರಶ್ನೋತ್ತರ ಸಮಯದಲ್ಲಿರುವುದಿಲ್ಲ ಅಥವಾ ಬೇರೆ ಸಮಯದಲ್ಲಿರುವುದಿಲ್ಲವೆನ್ನತಕ್ಕಂಥ ಚರ್ಚೆ ಬಹಳ ಆಗಿದೆ. ಈ ಬಗ್ಗೆ ನಾನು ಮೊದಲು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಬರೆದೆ. ಅವರು Official ಆಗಿ ಕಾರ್ಯಕ್ರಮದ ಪ್ರಯುಕ್ತ ನವದೆಹಲಿಗೆ ಹೋಗಿದ್ದಾರೇ ಅಥವಾ ನವದೆಹಲಿಯಿಂದ ಕೇಂದ್ರಸರ್ಕಾರದವರು ಇಲ್ಲಿಗೆ ಬಂದಿರುತ್ತಾರೆ, ಅವರ ಜೊತೆಗೆ ಏನಾದರೂ ಪ್ರವಾಸ ಹೋಗಿದ್ದರೇ ಕಾರ್ಯಕ್ರಮಕ್ಕೆ ಹೋಗಿದ್ದರೇ ಅಂಥವರಿಗೆ ಮಾತ್ರ ವಿನಾಯಿತಿ ನೀಡಬೇಕು. ಉಳಿದ ಎಲ್ಲಾ ಸಚಿವರು ಯಾರೇ ಇರಲಿ ಪ್ರವಾಸ ಹಾಕಿಕೊಳ್ಳಬಾರದು. ಅವರು ಕಡ್ಡಾಯವಾಗಿ ಸದನದಲ್ಲಿರಬೇಕೆಂದು ನಾನು ಮುಖ್ಯಮಂತ್ರಿಗಳಿಗೆ ಪತ್ರ ಬರೆದು ವಿನಂತಿ ಮಾಡಿಕೊಂಡಿದ್ದೇನೆ. ಆದರೆ, ಇಲ್ಲಿ ಏನಾಗಿದೆಯೆಂದರೆ, ಯಾವುದೋ ಕಾರ್ಯಕ್ರಮಗಳನ್ನು ಹಾಕಿಕೊಂಡು ಹೊರಟು ಹೋಗುತ್ತಾರೆ. ನಾವು ಪ್ರತಿಯೊಂದು ದಿವಸ ಸಹ ಹೇಳುವುದಕ್ಕಾಗುತ್ತದೆಯೇ? ಇದು ಸತ್‌ಸಂಪ್ರದಾಯವಲ್ಲ. ನಮ್ಮ ಕರ್ನಾಟಕ ವಿಧಾನಸಭೆಗೆ ಬಹಳ ಎತ್ತರವಾದ ಗೌರವವಿದೆ. ಇನ್ನು ಮುಂದಿನ ಅಧಿವೇಶನದಿಂದ ಯಾರೇ ಸಚಿವರು ಸಹ official programme ಇದ್ದರೆ ಮಾತ್ರ ಸದನಕ್ಕೆ ಬರುವುದಕ್ಕೆ ವಿನಾಯಿತಿ. ಸದನ ಇರುವ ಸಂದರ್ಭದಲ್ಲಿ ಪ್ರವಾಸ ಹಾಕಿಕೊಳ್ಳಬಾರದು. ಸದನದಲ್ಲಿ ಕಡ್ಡಾಯವಾಗಿರಬೇಕು. ಅದನ್ನು ಸಂಸದೀಯ ಸಚಿವರಾದ ತಾವು ಮುಖ್ಯಮಂತ್ರಿಗಳಿಗೆ ಮತ್ತು ಉಪ ಮುಖ್ಯಮಂತ್ರಿಗಳಿಗೆ ತಿಳಿಸಿ ಮುಂದೆ ಆ ರೀತಿ ಮಾಡಬೇಕೆಂದು ನಾನು ಸರ್ಕಾರಕ್ಕೆ ಸೂಚನೆ ಕೊಡುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) :- ಮಾನ್ಯ ಅಧ್ಯಕ್ಷರೆ, ಈ ಪ್ರಜಾಪ್ರಭುತ್ವವೆನ್ನುವುದು ಪ್ರಪಂಚದಲ್ಲಿ ಎಲ್ಲಿ ಪ್ರಾರಂಭವಾಯಿತು? ಎಲ್ಲೆಂದೆಲ್ಲಿಗೆ ಬಂದು ತಲುಪಿದ್ದೇವೆಂದು ನಾವು ಸ್ವಲ್ಪ ಅವಲೋಕನ ಮಾಡಬೇಕು. ಸಾಮ್ರಾಜ್ಯಶಾಹಿಗಳು ಜನರಿಂದ ವಸೂಲಿ ಮಾಡಿದ ತೆರಿಗೆಯನ್ನು ಅವರ ಮನಸ್ಸಿಗೆ ಬಂದ ಹಾಗೆ ಅವರ ವಿಲಾಸ, ಭೋಗಕ್ಕೆ ಖರ್ಚು ಮಾಡುತ್ತಿದ್ದರು. ರಾಜನ ಹತ್ತಿರ ಬಂದು ನೃತ್ಯ ಮಾಡಿದರೆ ಒಂದು ಮುತ್ತಿನ ಹಾರ ಬೀಸಿಹಾಕುವರು. ಇನ್ನೊಬ್ಬ ಭಟ್ಟಂಗಿ ಬಂದು ಒಂದು ವರ್ತಮಾನ ಕೊಟ್ಟರೆ ಅವನಿಗೆ 100 ಹಳ್ಳಿ

ಬರೆದುಕೊಟ್ಟುಬಿಡುತ್ತಿದ್ದರು. ಇದೆಲ್ಲ ಆದಾಗ no taxation without representation ಎಂದು ಹಾರೋಟ ಪ್ರಾರಂಭವಾಯಿತು. ನಮ್ಮನ್ನು ಕೇಳಲಾರದೇ ನಮ್ಮ ಮೇಲೆ ತೆರಿಗೆ ಹಾಕಬೇಡಿ, ನಾವು ಕೊಡುವುದಿಲ್ಲವೆನ್ನುವ ಸ್ಥಿತಿಗೆ ಜನರು ತಲುಪಿದರು. ಸಾಮ್ರಾಜ್ಯಶಾಹಿಗಳ ವಿರುದ್ಧ ತಿರುಗಿ ಬಿದ್ದರು. ಅನೇಕ ವರ್ಷಗಳ ಹೋರಾಟದ ನಂತರ ಇಲ್ಲಿಗೆ ಬಂದು ತಲುಪಿದ್ದೇವೆ.

ನಾವು ನಮ್ಮ Assembly ಯಲ್ಲಿ 2007–08 ರ ಪೂರ್ಣ ವರ್ಷಕ್ಕೆ ಬಜೆಟ್ pass ಮಾಡಿಕೊಟ್ಟಿದ್ದೇವೆಯೇ? I want to know. I am ignorant. ಅಥವಾ 3 ತಿಂಗಳಿಗೆ ನೀವು vote an account pass ಮಾಡಿದ್ದೀರಾ? What is the actual position? Vote an account 4 ತಿಂಗಳಿಗೆ ಕೊಟ್ಟಿದ್ದೀರಾ? ಅಥವಾ ಪೂರ್ಣ ಆರ್ಥಿಕ ವರ್ಷಕ್ಕೆ budget approve ಮಾಡಿದ್ದೀರಾ? ಇಲ್ಲಿ Assembly ಅಧಿವೇಶನ ನಡೆಯುತ್ತಿದೆ. ತಾವು Assembly ಅನ್ನು ಸಮಾವೇಶಗೊಳಿಸಿದ್ದೀರಿ. ನಾವೆಲ್ಲ ಇಲ್ಲಿ ಕುಳಿತಿದ್ದೇವೆ. ಕಲಾಪ ನಡೆಯುತ್ತಿದೆ. BAC ಯಲ್ಲಿ ವಿಷಯ ಚರ್ಚೆಯಾಗುವುದು, ಶೆಟ್ಟರ್‌ರವರೆ, I am appealing to you. You have a special status in this House. You are the former Opposition Leader. ಮುಖ್ಯಮಂತ್ರಿಯಾಗುವ ಯೋಗ ಯಾರಿಗಾದರೂ ಬರಬಹುದು. ಆದರೆ, Opposition Leader ಆಗುವ ಯೋಗ ಎಲ್ಲರಿಗೂ ಬರುವುದಿಲ್ಲ. ಸಾರ್ವಜನಿಕ ಜೀವನದಲ್ಲಿ ಒಂದು ಹಂತ ತಲುಪಿದ ಮೇಲೆ ನಾವು ಪಕ್ಷಗಳ ಆ ಸೀಮಾರೇಖೆ ಏನಿರುತ್ತದೆ ಅದನ್ನು ದಾಟಿ ವರ್ತಿಸಬೇಕಾಗುತ್ತದೆ. ಒಂದು ಕಡೆ ತಾವಿಲ್ಲಿ ಸಭೆ ನಡೆಸುತ್ತಿದ್ದೀರಿ. ಸರ್ಕಾರ ಹೇಳಿಕೆಯನ್ನು ಕೊಡುತ್ತದೆ, ನಾವು ಬೇಡಿಕೆಗಳನ್ನು ಮುಂದಿಡುತ್ತೇವೆ. ಮತ್ತೊಂದು ಕಡೆಗೆ parallel Assembly that is going on. I do not call it ವಿಕಾಸಯಾತ್ರೆ.

ಅವರು ಇವತ್ತು ಕೂಡ ಸಂವಿಧಾನಬದ್ಧವಾಗಿ ಅಧಿಕಾರವನ್ನು ಕೈಹಿಡಿದಿದ್ದಾರೆ. ರಾಜ್ಯದ ಉಪಮುಖ್ಯಮಂತ್ರಿಗಳಾಗಿದ್ದಾರೆ, ಹಣಕಾಸು ಇಲಾಖೆಯ ಮಂತ್ರಿಯಾಗಿದ್ದಾರೆ. ಅವರು House ಹೊರಗಡೆ declarations ಮಾಡುತ್ತಿದ್ದಾರೆ. ಇಲ್ಲಿ ನಾವು ಕುಳಿತು ಕಲಾಪ ಮಾಡುತ್ತಿದ್ದೇವೆ. ಸಾರ್ವಜನಿಕರ ದೃಷ್ಟಿಯಲ್ಲಿ valid ಯಾವುದು? ಅದಾ ಅಥವಾ ಇದೇ? Is there an assembly existence in Karnataka, which is duly elected and recognized by the constitution ? Or is that the Government and the Assembly? ಸಾರ್ವಜನಿಕರು ಯಾವುದು

valid ಎಂದು ತಿಳಿದುಕೊಳ್ಳಬೇಕು? ಅವರಿಗೆ ಪರಿಹಾರ ಆಗಬೇಕಾಗಿದ್ದರೆ ಅವರು ಎಲ್ಲಿಗೆ ಬರಬೇಕು? ಇಲ್ಲಿಗೆ ಬರಬೇಕೇ? ಇಲ್ಲಿಗೆ ಬಂದು ತಮ್ಮ ಜನಪ್ರತಿನಿಧಿಗಳ ಹತ್ತಿರ ತಮ್ಮ ಕಷ್ಟ ಹೇಳಿಕೊಳ್ಳಬೇಕೇ? ಅಥವಾ ಅಲ್ಲಿಗೆ ಹೋಗಿ ಹೇಳಿಕೊಳ್ಳಬೇಕೇ? ಸರಿ, ಅವರು ವಿಕಾಸಯಾತ್ರೆಗೆ ಹೊರಟರು. ನಾಳೆ ಇನ್ನೊಬ್ಬ ಮಂತ್ರಿ ಅವರದೊಂದು ಪಾರ್ಟಿ ಇರುತ್ತದೆ. ಅವರು ವಿಹಾರ ಯಾತ್ರೆಗೆ ಹೋಗುತ್ತಾರೆ. 4 ಜನ ಮಂತ್ರಿಗಳು important portfolios ಇಟ್ಟುಕೊಂಡು 4 ದಿಕ್ಕಿನಲ್ಲಿ ಯಾತ್ರೆಗಳನ್ನು ಮಾಡುತ್ತಿರುತ್ತಾರೆ. ನಾವು ಏನೂ ಕೆಲಸವಿಲ್ಲದಿರುವವರು ಯಾತ್ರೆಗೆ ಹೋಗುವುದಕ್ಕೆ ಆಗದಿರುವವರು ಕೈಕಾಲು ಸುಸ್ತಾದವರು ಇಲ್ಲಿ ಕುಳಿತುಕೊಳ್ಳುತ್ತೇವೆ.

ತಾವು Assembly ನಡೆಸುತ್ತಿರುತ್ತೀರಿ. Is there any respect and sanctity left for this House? It is just not your advising the Parliamentary Affairs Minister or the Chief Minister to behave well in future. This is fundamental issue. Where are we taking this House? ಇದು ಯಾರೋ ಒಬ್ಬರ ಖುಷಿಗೆ ಅಸ್ತಿತ್ವಕ್ಕೆ ಬಂದಂಥ ಸದನವಲ್ಲ. ಲಕ್ಷಾಂತರ ಜನ ಪ್ರಾಣತ್ಯಾಗ ಮಾಡಿ ಒಂದು ಆದರ್ಶದ ಹೋರಾಟಗಳನ್ನು ನಡೆಸಿ ತೆಗೆದುಕೊಂಡು ಬಂದಿರತಕ್ಕಂಥ ಸದನ ಇದಾಗಿದೆ. ಈ ಸದನದ ಗೌರವವೇನು? ಘನತೆ ಏನು? ನಾವು ಸದನಕ್ಕೆ ಬಾರದೇ ಹೋದರೆ ನಮಗೆ ಒಂದು ರೀತಿಯ ಭಾವನೆ ಉಂಟಾಗುತ್ತದೆ. ಬಂದು ಕುಳಿತುಕೊಂಡರೆ ಇದಕ್ಕೆಲ್ಲ parties ಆಗುತ್ತಿದ್ದೇವಲ್ಲ ಎಂದು ಇನ್ನೊಂದು ರೀತಿ ಯಾತನೆಯಿಂದ ನಾವೆಲ್ಲ ನರಳುತ್ತಿದ್ದೇವೆ.

Sir, you have to assert. You have to make your views clear or this Assembly should debate today and take a stand that whatever declarations made by anybody holding office outside the purview of the Assembly when the Assembly is in session, should be declared as null and void. ಆ proceedings ಏನು ಹೊರಗಡೆ ನಡೆಯುತ್ತಿದೆ, ಮೂರು ಕಾಸಿನ ಬೆಲೆ ಸಹ ಇರಬಾರದು. ಇಲ್ಲದಿದ್ದರೆ ದಯಮಾಡಿ ಇದನ್ನು close ಮಾಡಿ. ಅದೇ valid ಎಂದು ಹೇಳೋಣ. ನಾವು ಹೋಗಿ ಯಾವುದೋ ಒಂದು ಮರದ ಕೆಳಗಡೆ ಕುಳಿತುಕೊಳ್ಳುತ್ತೇವೆ. ನಮಗೆ ಬೇಕಾದ ಅರ್ಜಿ ಮೂಲಕ ಮನವಿ ಮಾಡುತ್ತೇವೆ, ಅವರು ಹೇಳಿದ ಹಾಗೆ ಕೇಳಿಕೊಂಡು ಏನೋ ಕೊಟ್ಟ ಬಕ್ಷೀಸು ತೆಗೆದುಕೊಂಡು ಹಳೆಯ ಕಾಲದ ರಾಜರುಗಳ ಹತ್ತಿರ

ಇದ್ದಂತೆ ನಾವು ಏನಾದರೊಂದು ಬೇಕಾಗಿರುವ ಬೇಡಿಕೆಗಳನ್ನು ಸಲ್ಲಿಸಿ ಮನವಿ ಕೊಟ್ಟು ಮಂಜೂರು ಮಾಡಿಸಿಕೊಂಡು ಹೋಗುತ್ತೇವೆ. ಈ ಸದನಕ್ಕೆ ಏನಾದರೂ ಘನತೆ ಇದೆಯೇ? ನಾನು ಪಕ್ಷವನ್ನು ವಹಿಸಿಕೊಂಡು ಮಾತನಾಡುತ್ತಿಲ್ಲ.

ಮಾನ್ಯ ಪ್ರಕಾಶ್‌ರವರೆ, ನಾವು ಇವತ್ತು ಇರುತ್ತೇವೆ, ನಾಳೆ ಹೋಗುತ್ತೇವೆ. ಇದನ್ನು ಈ ಸದನಕ್ಕೆ ಮಾರ್ಗದರ್ಶನವಾಗಿ ಈ records ನಲ್ಲಿ ದಾಖಲೆಗಳಲ್ಲಿ ಮುಂದಿನ ಜನಾಂಗಕ್ಕೆ ಬಿಟ್ಟು ಹೋಗಬೇಕಾಗಿರತಕ್ಕಂಥಾದ್ದು. ದಯಮಾಡಿ ನಿಮ್ಮ ಆತ್ಮಕ್ಕೆ ಪ್ರಶ್ನೆಯನ್ನು ಹಾಕಿಕೊಳ್ಳಿ, ಮಾನ್ಯ ಜಗದೀಶ್ ಶೆಟ್ಟರ್‌ರವರೆ, ನಾನು ನಿಮ್ಮಲ್ಲಿ ವೈಯಕ್ತಿಕವಾಗಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಪಕ್ಷದ ಸೀಮಾ ರೇಖೆಯನ್ನು ದಾಟಿ ಮಾತನಾಡಿ. ಈ ಪ್ರವೃತ್ತಿ ಒಳ್ಳೆಯದಲ್ಲ. Extra-Constitutional authorities ಸರ್ಕಾರಗಳ ಮೇಲೆ influence ತರತಕ್ಕಂಥಾದ್ದು, ಸರ್ಕಾರದ ಜವಾಬ್ದಾರಿಯನ್ನು ಹೊಂದಿರತಕ್ಕಂಥವರು ಸದನ ನಡೆಯುವ ವೇಳೆಗೆ ಕಲಾಪಗಳನ್ನು ಬಿಟ್ಟು ಹೊರಗಡೆ ಹೋಗಿ ಕಲಾಪ ನಡೆಸತಕ್ಕಂಥಾದ್ದು ಇವೆಲ್ಲವೂ ಕೂಡ ಏಕ ರೀತಿಯ ಅಪರಾಧಗಳು.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್ ಕುಮಾರ್‌ರವರು ಕೆಲವೊಂದು ವಿಚಾರಗಳನ್ನು ಹೇಳಿದರು. ನಾನು ಪ್ರತಿಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ. ಮಾನ್ಯ ಯಡಿಯೂರಪ್ಪನವರು ಸಹ ಪ್ರತಿಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. ನನಗೆ ಈ ಸದನದ ಬಗ್ಗೆ ಗೌರವವಿದೆ. ಅದೇ ರೀತಿ ಮಾನ್ಯ ಯಡಿಯೂರಪ್ಪನವರಿಗೂ ಸಹ ಗೌರವವಿದೆ. ಇದೇನಾಯಿತೆಂದರೆ, ವಿಶೇಷವಾದ ಪರಿಸ್ಥಿತಿಯಲ್ಲಿ ಆ ಯಾತ್ರೆಗೆ ಅವರು ಹೋಗಿರುವಂಥಾದ್ದು (ಗೊಂದಲ) ಮಾನ್ಯ ರಮೇಶ್ ಕುಮಾರ್‌ರವರಿಗೆ ಮತ್ತು ಇನ್ನಿತರರಿಗೆ ಸದನದ ಬಗ್ಗೆ, ಸದನದಲ್ಲಿ ನಡೆಯುವ ಕಲಾಪಗಳ ಬಗ್ಗೆ ಎಷ್ಟು ಗೌರವವಿದೆಯೋ ಅಷ್ಟೇ ಗೌರವ ನಮಗೂ ಸಹ ಇದೆ. ನಾನು ಮತ್ತು ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿ ಯಾವ ರೀತಿ ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದಾರೆನ್ನುವುದು ಕರ್ನಾಟಕದ ಜನತೆಗೆ ಗೊತ್ತಿದೆ. ಅಷ್ಟೇ ಅಲ್ಲ, ವಿಧಾನಸಭೆ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ ಯಾವುದೇ ಸಂದರ್ಭದಲ್ಲಿ ಅಂಥ ಅರ್ಜೆಂಟ್ ಇದ್ದರೂ ಸಹಿತ ಅವರು ಅಧಿವೇಶನಕ್ಕೆ ಬರುವುದನ್ನು ತಪ್ಪಿಸಲಿಲ್ಲ. ಇವತ್ತು ಈ ಒಂದು ವಿಶೇಷವಾದ ಕಾರಣಕ್ಕಾಗಿ ಹೋಗಿರುವಂಥದ್ದು ಮತ್ತು ಇದು ಮುಂದುವರೆದಂಥ ಅಧಿವೇಶನವಾಗಿದೆ.

ಮೊದಲು regular ಆಗಿ 5 ನೇ ತಾರೀಖಿನವರೆಗೆ ನಿಗದಿಯಾದಂಥ ಅಧಿವೇಶನ. ಅಲ್ಲಿಯವರೆಗೆ ಯಾವುದೇ ಕಲಾಪದಲ್ಲಿ ಮಾನ್ಯ ಯಡಿಯೂರಪ್ಪನವರು ಗೈರುಹಾಜರಾಗಲಿಲ್ಲ. ಆವತ್ತು BAC meetingನಲ್ಲಿ ಅವರು ಈ ಕಾರಣದಿಂದ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದರು. ಮೊದಲೇ ನಿಗದಿಯಾದಂಥ ಕಾರ್ಯಕ್ರಮಗಳಿವೆ, ಮುಂದುವರೆದಂಥ ಈ ಅಧಿವೇಶನದಲ್ಲಿ ನನಗೆ ಭಾಗವಹಿಸಲಿಕ್ಕೆ ಅಸಹಾಯಕತೆ ಆಗುತ್ತದೆನ್ನುವುದನ್ನು ಆವತ್ತು ಅವರು ಹೇಳಿದರು. ಈ ಸದನಕ್ಕೆ ಅವರು ಎಂದೂ ಅಗೌರವ ಕೊಡುವಂಥಾದ್ದಾಗಲಿ, ಅಥವಾ ಈ ಸದನವನ್ನು ಸಣ್ಣದಾಗಿ ಕಾಣುವಂಥದ್ದಾಗಲಿ ಹಿಂದೆಂದೂ ಮಾಡಿರಲಿಲ್ಲ. ಈ ಸದನದ ಬಗ್ಗೆ ಬಹಳಷ್ಟು ಗೌರವವಿಟ್ಟುಕೊಂಡಿದ್ದಾರೆ. ಮತ್ತೆ ಮಾನ್ಯ ರಮೇಶ್‌ಕುಮಾರ್‌ರವರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ, ಹೊರಗಡೆ ಹೊಸದಾಗಿ ಘೋಷಣೆಗಳನ್ನು ಮಾಡುತ್ತಿದ್ದಾರೆ, ಹೊಸದಾಗಿ ಬಜೆಟ್ announcement ಮಾಡುತ್ತಿದ್ದಾರೆನ್ನುವ ಮಾತನ್ನು ಹೇಳಿದರು. ಇವತ್ತು ನನ್ನ ಗಮನಕ್ಕೆ ಬಂದ ಮಾಹಿತಿ ಪ್ರಕಾರ ಹೇಳುವುದಾದರೆ, ಬಜೆಟ್‌ನಲ್ಲಿ mention ಮಾಡಿರುವುದನ್ನು ಬಿಟ್ಟರೆ ಇನ್ಯಾವುದೇ ಹೊಸ ಘೋಷಣೆಗಳನ್ನು ಅವರು ಮಾಡಿಲ್ಲ. ಆ ರೀತಿ ಏನಾದರೂ ಮಾಡಿದ್ದರೆ ಅದನ್ನು ಸದನದ ಮುಂದೆ ತೆಗೆದುಕೊಂಡು ಬರಲಿ. ಯಾವುದಾದರೂ ಹೊಸ ಘೋಷಣೆ ಮಾಡಿದ್ದರೆ, ಯಾವುದೇ ಒಂದು ವಿಷಯಕ್ಕೆ ಅವರು ಹೊಸದಾಗಿ ಬಜೆಟ್ allocation ಮಾಡಿದ್ದರೆ, ಆ ರೀತಿ ಏನಾದರೂ ಇದ್ದರೆ ಅಂಥವನ್ನು ಗಮನಕ್ಕೆ ತೆಗೆದುಕೊಂಡು ಬರಲಿ.

ಇವತ್ತು ನನ್ನ ಗಮನಕ್ಕೆ ಬಂದ ಮಾಹಿತಿಯಾಧಾರದ ಮೇಲೆ ಹೇಳುವುದಾದರೆ, ಬಜೆಟ್‌ನಲ್ಲಿ mention ಮಾಡಿದ್ದು ಬಿಟ್ಟರೆ, ಅವರು ಯಾವುದೇ ಹೊಸ ಘೋಷಣೆಗಳನ್ನು ಮಾಡಿಲ್ಲ. ಆ ರೀತಿ ಇದ್ದರೆ, ಸದನದ ಗಮನಕ್ಕೆ ತರಲಿ. ಹಾಗೆ, ಯಾವುದಾದರೂ ಹೊಸದಾಗಿ ಘೋಷಣೆ ಮಾಡಿದ್ದರೂ ಯಾವುದೇ ಒಂದು ವಿಷಯವನ್ನು ಅವರು ಬಜೆಟ್ allocation ಮಾಡಿದ್ದು ಏನಾದರೂ ಇದ್ದರೆ, ಗಮನಕ್ಕೆ ತೆಗೆದುಕೊಂಡು ಬರಲಿ. ಈ ರೀತಿ vague ಆಗಿ allegation ಮಾಡುವಂಥಾದ್ದು ಬೇಡ. ಯಡಿಯೂರಪ್ಪನವರಿಗೆ ಈ ಸದನದ ಬಗ್ಗೆ ಗೌರವವಿದೆ. ಅವರ ಬಗ್ಗೆ ಬಹಳ ಹಗುರವಾಗಿ ಮಾತನಾಡುವಂಥಾದ್ದು ಸರಿಯಲ್ಲ. ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹೀಗಾಗಿ ಒಂದು ಅಸಹಾಯಕತೆ ಇದ್ದರೆ, ಅವರು ಅಲ್ಲಿ ಹೋಗಿದ್ದಾರೆ ಹೊರತು ಬೇರೆ ಯಾವುದೇ ಕಾರಣವಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಸ್. ರಾಜೇಂದ್ರನ್ :- ನಾನು ಮಾತನಾಡಿ ನಿಮಗೇನೂ ಅಗೌರವ ತರಬೇಕೆಂದಿಲ್ಲ. BAC ನಡೆಯುವಾಗ ತಾವೂ ಇದ್ದಿರಿ. ನೀವೆಲ್ಲ ಇದ್ದಿರಿ.

ಶ್ರೀ ಎಸ್. ಶಿವಣ್ಣ (ರೇಷ್ಮೆ) :- ನೀವೇ ಸಾಕ್ಷಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- BAC ಯಲ್ಲಿ ನಾವೇ ಸಾಕ್ಷಿ. ನೀವು ಸಾಕ್ಷಿಯಾಗುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಎಸ್. ಶಿವಣ್ಣ :- ಏಕ್ ದಿನ್ ಕಾ ಸುಲ್ತಾನ್ ಇದ್ದ ಹಾಗೆ ನೀವೇ ಸಾಕ್ಷಿ.

ಶ್ರೀ ಎಸ್. ರಾಜೇಂದ್ರನ್ :- BAC meeting ನಲ್ಲಿ ನಾವು ಇರುವುದು.

ಅಧ್ಯಕ್ಷರು :- ಅದೆಲ್ಲ ಮಾತನಾಡಿದ್ದಾರೆ, ಕೆಲವು ವಿಚಾರ ಹೇಳಿದ್ದಾರೆ.

ಶ್ರೀ ಎಸ್. ರಾಜೇಂದ್ರನ್ :- ತಾವೂ BAC meeting ನಲ್ಲಿ ಇದ್ದಿರಿ.

ಅಧ್ಯಕ್ಷರು :- ಸರಿ. ಪದೇ ಪದೇ ಅದೇ ವಿಷಯವನ್ನು ಎತ್ತಿಕೊಂಡು ಹೇಳುವುದರಲ್ಲಿ ಏನರ್ಥವಿದೆ?

ಶ್ರೀ ಎಸ್. ರಾಜೇಂದ್ರನ್ :- ತಾವು ತೀರ್ಮಾನ ಮಾಡಬಹುದು. ಇವರು ಇಲ್ಲ, 11 ನೇ ತಾರೀಖಿಗೆ ಹೊರಗಡೆ ಹೋಗುತ್ತೇವೆಂದು ಹೇಳಿದ್ದಾರೆಂದು ಹೇಳುವುದು ಸುಳ್ಳು. It is false. Very clearly, you have assured in BAC meeting. 11 ನೇ ತಾರೀಖು ಬಂದು ನಾನು ಉತ್ತರ ಕೊಡುತ್ತೇನೆಂದು ಹೇಳಿದ್ದರು. ನಾನು 10 ನೇ ತಾರೀಖು ಇರುವುದಿಲ್ಲವೆಂದು ಹೇಳಿದ್ದರು. ಆದರೆ, 11 ನೇ ತಾರೀಖು ಇರುತ್ತೇನೆಂದು ಹೇಳಿದ್ದರು. Don't give wrong information to the House.

ಅಧ್ಯಕ್ಷರು :- ಆಯಿತು ಬಿಡಿ.

ಡಾ॥ ಹೆಚ್.ಸಿ. ಮಹಾದೇವಪ್ಪ :- BAC meeting ನಲ್ಲಿ ಆಗಿರುವುದನ್ನು ಆಯಿತು ಬಿಡಿ ಎಂದು ಹೇಳಿದರೆ ಆಗುತ್ತದೆಯೇ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅವರು ಹೇಳುವುದು ಸತ್ಯ. ನಾವು ಹೇಳುವುದೆಲ್ಲ ಸತ್ಯಕ್ಕೆ ದೂರವಾದುದೇ? I am very sorry.

ಶ್ರೀ ಎಂ.ಪಿ. ಪ್ರಕಾಶ್ :- ಸದನದಲ್ಲಿ ಇಂಥ ಅನೇಕ ಪ್ರಶ್ನೆಗಳು ಪ್ರಸ್ತಾಪಿಸಲ್ಪಟ್ಟಿವೆ ಮತ್ತು ಅನೇಕರಿಗೆ ನೋವಾಗಿದೆ ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇದರಲ್ಲಿ ನಾವು ಯಾರನ್ನೋ ಸಮರ್ಥಿಸಲಿಕ್ಕೆ ಅಥವಾ ಆಗಿರುವಂಥಾದ್ದು ಸಮರ್ಥನೀಯ ಕಾರಣವೆಂದು ಹೇಳಲಿಕ್ಕೆ ನಾವ್ಯಾರೂ ತಯಾರಿಲ್ಲ. ಸದನ ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ ಪ್ರತಿಯೊಬ್ಬ ಶಾಸಕರೂ ಕೂಡ ಹಾಜರಾಗಬೇಕು. ಅದರ ಜೊತೆಗೆ, ಮಂತ್ರಿಗಳಿಗೂ ಹೆಚ್ಚಿನ ಜವಾಬ್ದಾರಿ ಇದೆ. ಸರ್ಕಾರದ ಪರವಾಗಿ ಉತ್ತರವನ್ನು ಕೊಡಬೇಕು. ಅದರಲ್ಲಿ ಯಾವುದೇ ತರಹ ರಾಜಿ ಪ್ರಶ್ನೆಯೇ ಇಲ್ಲ. ಇದು ಇಲ್ಲಿಯವರೆಗೂ ಬಂದಿರುವಂಥ ಸಂಪ್ರದಾಯ. ಇದು ನಮ್ಮ ನಡವಳಿಕೆಗಳು. ಆಕಸ್ಮಾತ್ ಆಗಿ ಏನಾದರೂ ತುರ್ತು ಪರಿಸ್ಥಿತಿ ಇರುವಂಥ ಸಂದರ್ಭದಲ್ಲಿ ಇದ್ದಾಗ ಮಾನ್ಯ ಅಧ್ಯಕ್ಷರ ಪರವಾನಗಿಯನ್ನು ತೆಗೆದುಕೊಂಡು ಆ ಕಾರ್ಯಕಲಾಪಗಳ ಜವಾಬ್ದಾರಿಯನ್ನು ಬೇರೆಯವರಿಗೆ ವಹಿಸಲಿ ಎನ್ನುವಂಥ ಮಾತನ್ನು ಹೇಳಿ ಕೊಡತಕ್ಕಂಥಾದ್ದು ಕೂಡ ಅತ್ಯಂತ ಅಪೇಕ್ಷಣೀಯವಾಗಿರತಕ್ಕಂಥಾದ್ದು ಮತ್ತು ಆ ಸಂಪ್ರದಾಯವನ್ನು ಇಲ್ಲಿಯವರೆಗೂ ನಾವು ನಡೆಸಿಕೊಂಡು ಬಂದಿದ್ದೇವೆ. ಮತ್ತೆ, ನಾನು ಆ ವಿಚಾರಕ್ಕೆ ಬರುತ್ತೇನೆ.

ಈ ಸಂದರ್ಭದಲ್ಲಿ ಬರಗಾಲಕ್ಕೆ ಸಂಬಂಧಪಟ್ಟಂಥ ವಿಚಾರದಲ್ಲಿ ಹಣಕಾಸಿನ ಸಚಿವರೇ ಇರಬೇಕೆನ್ನುವಂಥದ್ದೇನಿದೆ, ಅದು ಅಪೇಕ್ಷಣೀಯವಾಗಿದ್ದರೂ ಕೂಡ ಮಾನ್ಯ ಮುಖ್ಯಮಂತ್ರಿಗಳಿದ್ದಾರೆ, ಕಂದಾಯ ಸಚಿವರಿದ್ದಾರೆ. ಇಡೀ ಸರ್ಕಾರ ಇಲ್ಲಿರುವಂಥ ಸಂದರ್ಭದಲ್ಲಿ ಅದಕ್ಕೆ ಬೇಕಾಗಿರುವಂಥ ಉತ್ತರವನ್ನು ಸರ್ಕಾರ ಕೊಡುತ್ತದೆ. ಸರ್ಕಾರ ಸದನದಲ್ಲಿ ಉತ್ತರವನ್ನು ಕೊಟ್ಟಮೇಲೆ ಉತ್ತರದ ಅನುಗುಣವಾದಂಥ ರೀತಿಯಲ್ಲಿ ಕಾರ್ಯಕ್ರಮಕ್ಕೆ ಹಣ ಬಿಡುಗಡೆ ಮಾಡುವಂಥಾದ್ದು ಕೂಡ ಕ್ರಮ ಕೈಗೊಳ್ಳಲಿಕ್ಕೆ ಸಾಧ್ಯತೆ ಇದೆ. ಇದು ಹಿರಿಯರಾದಂಥ ತಮಗೆಲ್ಲರಿಗೂ ಗೊತ್ತಿರುವಂಥ ವಿಷಯ. ಆದ್ದರಿಂದ, ಇವತ್ತೇನು ಬರಗಾಲದ ವಿಷಯದಲ್ಲಿ ಚರ್ಚೆ ಬರುತ್ತದೆ, ಹಣಕಾಸಿನ ತೊಂದರೆ ಇರುವುದು ಬಂದಾಗಲೂ ಕೂಡ ನಾವು ಈಗಾಗಲೇ ಹೇಳಿದ್ದೇವೆ, ಸುಮಾರು 170 ಕೋಟಿ ರೂಪಾಯಿಗಳಿಗಿಮತ ಹೆಚ್ಚು ಹಣ ಖರ್ಚಾಗಿರುವುದು ಬಿಟ್ಟು ಎಲ್ಲಾ ಜಿಲ್ಲಾಧಿಕಾರಿಗಳ ಹತ್ತಿರ P.D. account ನಲ್ಲಿ

ಹಣ ಇದೆ. (ಗೊಂದಲ) I will come back to you Sir. Please allow me another five minutes. ಏಕೆ ಹೀಗೆ ಮಾಡುತ್ತೀರಿ?

170 ಕೋಟಿ ರೂಪಾಯಿಗಳಷ್ಟು ಜಿಲ್ಲಾಧಿಕಾರಿಗಳ ಹತ್ತಿರ P.D. account ನಲ್ಲಿದೆ. ಇದರ ಜೊತೆಗೆ, ಸರ್ಕಾರ ಆದೇಶವನ್ನು ಕೂಡ ಕಳುಹಿಸಿದೆ. ಕಂದಾಯ ಇಲಾಖೆಯಿಂದ ಸುತ್ತೋಲೆ ಹೋಗಿದೆ. ಬರ ನಿರ್ವಹಣೆಗೆ ಸಂಬಂಧಪಟ್ಟಂತೆ ವಿಪತ್ತು ನಿರ್ವಹಣೆ ಇಲಾಖೆಯಿಂದ ಕೂಡ ಸುತ್ತೋಲೆ ಹೋಗಿದೆ. ಒಂದು ವೇಳೆ, ನಿಮಗೆ ಹಣದ ಕೊರತೆ ಕಂಡುಬಂದರೆ ತತ್‌ಕ್ಷಣದಲ್ಲಿ ಆ ಹಣವನ್ನು ಬೇರೆ ಸಂದರ್ಭಗಳಿಗಾಗಿರುವಂಥ ಹಣದಲ್ಲಿ ನೀವು divert ಮಾಡಿ ಕುಡಿಯುವ ನೀರಿನ ಮತ್ತು ಮೇವಿಗೆ ಸಂಬಂಧಪಟ್ಟಂಥಾದ್ದಕ್ಕೆ ನೀವು ಆ ಕೆಲಸವನ್ನು ಮಾಡಿಕೊಳ್ಳಬಹುದು, ನಂತರ, ಹೊಂದಾಣಿಕೆ ಮಾಡಿಕೊಳ್ಳಬಹುದೆಂದು ಕೂಡ ಇದೆ. ಚರ್ಚೆ ಬಂದಿರುವ ಸಂದರ್ಭದಲ್ಲಿ ನಾನು ವಿವರವಾಗಿ ತಿಳಿಸುತ್ತೇನೆ. ಆದ್ದರಿಂದ, ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹಣಕಾಸಿನ ಸಿಚಿವರಾಗಿದ್ದು, ಅವರು ಈ ದಿವಸ ಸಭೆಯಲ್ಲಿಲ್ಲವೆನ್ನುವ ಕಾರಣಕ್ಕಾಗಿದೆಯೇ ಇದರ ನಿರ್ವಹಣೆಯಲ್ಲಿ ಯಾವುದೇ ಆಲಕ್ಷ್ಯವನ್ನು ತೋರಿಸುತ್ತೇವೆ ಅಥವಾ ನಿರ್ಧಾರವೇ ಆಗಲಾರದೇ ಹೋಗುತ್ತದೆಂದು ಭಾವಿಸಬೇಕಾದುದಿಲ್ಲವೆಂದು ಹೇಳುತ್ತೇನೆ ಮತ್ತು ಆ ಸಂದರ್ಭದಲ್ಲಿ ಉತ್ತರವನ್ನು ಕೊಡುತ್ತೇನೆ. ಇಲ್ಲಿ ಇನ್ನು ಮೇಲೆ ಅದು ಚರ್ಚೆಯಾಗುವಂಥದ್ದು ಏನೂ ಬೇಕಾಗಿಲ್ಲ ಸಾರ್.

ಈಗ ಇರತಕ್ಕಂಥಾದ್ದಿಷ್ಟೇ, ವಿಧಾನ ಸಭೆಯ ಹೊರಗಡೆಗೆ ಕಾರ್ಯಕಲಾಪಗಳು ನಡೆಯುವ ಸಂದರ್ಭದಲ್ಲಿ ಮಹತ್ವವಾಗಿರುವ ವಿಷಯಗಳನ್ನು ಸಾರ್ವಜನಿಕರಿಗೆ ಹೇಳಬಾರದು ಎಂದು ಇಲ್ಲಿಯವರೆಗೂ ಮಾಡಿಕೊಂಡು ಬಂದಿರುವ ಸಂಪ್ರದಾಯ. ಯಾವುದೇ ಮಹತ್ವದ ವಿಷಯವಿದ್ದರೂ ಕೂಡ ಅದನ್ನು ಮೊದಲು ಸದನದಲ್ಲಿ ಪ್ರಕಟಿಸಬೇಕಾಗುತ್ತದೆ. ಅದಾದನಂತರ ಮಾಡಬೇಕಾಗಿರತಕ್ಕಂಥಾದ್ದಿದೆ. ಈಗಾಗಲೇ ಜಗದೀಶ್ ಶೆಟ್ಟರ್‌ರವರು, ನನಗೆ ಬಂದಿರುವಂಥ ಮಾಹಿತಿಯ ಆಧಾರದ ಮೇಲೆ ಅಂಥ ಯಾವುದಾದರೂ ಹೊಸ ಯೋಜನೆಯನ್ನಾಗಲಿ, ಹೊಸ ವಿಷಯಗಳನ್ನಾಗಲಿ ಉಪ ಮುಖ್ಯಮಂತ್ರಿಗಳು ಪ್ರಕಟಿಸಿಲ್ಲ, ಯಾವುದನ್ನು ಆಯವ್ಯಯದಲ್ಲಿ ಪ್ರಸ್ತಾಪ ಮಾಡಿದ್ದರು, ಅಷ್ಟನ್ನು ಮಾತ್ರ ಅವರು ಹೇಳಿದ್ದಾರೆನ್ನುವ ಮಾತನ್ನು ಅವರು ಹೇಳಿದ್ದಾರೆ. ಅದಕ್ಕೆ ಪತ್ರಿಕಾ ವರದಿ ಕೂಡ ಇದೆ ಎನ್ನುವ ಮಾತನ್ನೂ ಹೇಳಿದ್ದಾರೆ. ಅದರ ಬಗ್ಗೆ ಖಂಡಿತವಾಗಿಯೂ ತಾವು ಪರಾಂಬರಿಸಿ ನಿರ್ಣಯ ಮಾಡಬೇಕು. ಅದು ಯಾರೇ ಮಾಡಿರಲಿ, ದೊಡ್ಡವರೇ ಮಾಡಿರಲಿ, ಸಣ್ಣವರೇ ಮಾಡಿರಲಿ, ಅದು ತಪ್ಪು ಎನ್ನುವ ಮಾತನ್ನು ನಾನು ಒಪ್ಪುತ್ತೇನೆ.

ಈಗ ಅವರು Business Advisory Committee ಯಲ್ಲಿ ಇದ್ದಾಗ ಏನು ಚರ್ಚೆಯಾಯಿತು ಎನ್ನತಕ್ಕಂಥಾದ್ದು ಬಹಳ ಪ್ರಮುಖವಾಗಿರುವಂಥಾದ್ದು. ಗ್ರಹಿಕೆಯಲ್ಲಿ ವ್ಯತ್ಯಾಸವೆಂದು ಭಾವಿಸಬಹುದು. ಅದರಲ್ಲಿ ನಾವು ಸಾಕ್ಷಿ ತರುವುದು, ನೀವು ಹೀಗೆ ಹೇಳಿದಿರಿ ಎಂದು ಹೇಳುವುದು, ಯಾವುದಾದರೊಂದು ವಿಷಯವನ್ನು ತಾರ್ಕಿಕ ಹಂತಕ್ಕೆ ಒಯ್ಯಬಾರದು. ಅದೇ ಪ್ರಜಾಪ್ರಭುತ್ವ, ಅದನ್ನು ಮುರಿಯುವ ಮಟ್ಟಕ್ಕೆ ತೆಗೆದುಕೊಂಡು ಹೋದರೆ ಅದು ಪ್ರಜಾಪ್ರಭುತ್ವವಾಗುವುದಿಲ್ಲ. ಅದನ್ನು ನಾವು ಎಷ್ಟಾದರೂ ಬಗ್ಗಿಸಬಹುದು. ಆದ್ದರಿಂದ, ಅಲ್ಲಿ ಆಗಿರುವ ವಿಷಯದಲ್ಲಿ ಪ್ರಾಯಶಃ ಅವರ ಗ್ರಹಿಕೆ ತಪ್ಪಾಗಿರಬಹುದು ಅಥವಾ ನಮ್ಮ ಗ್ರಹಿಕೆ ತಪ್ಪಾಗಿರಬಹುದು. 11 ನೇ ತಾರೀಖು ತಮ್ಮ ಮೇಲೆ ಹಕ್ಕುಚ್ಯುತಿ ಮಂಡಿಸಲಾಗುತ್ತದೆ, ಅದಕ್ಕೆ ಉತ್ತರ ಕೊಡುತ್ತೇನೆಂದು ಹೇಳಿ ಅವರು ಬಂದು ಹೋದರು. ಆದರೂ ಕೂಡ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸನ್ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಈಗ ತಾವೇನು ಹೇಳಿದಿರಿ ಮತ್ತು ಅಧ್ಯಕ್ಷರು ತಾವೇನು ಅಪ್ಪಣೆ ಕೊಡಿಸಿದ್ದೀರಿ, ಉಪಮುಖ್ಯಮಂತ್ರಿಗಳಾಗಲಿ, ಮುಖ್ಯಮಂತ್ರಿಗಳಾಗಲಿ, ನಾವ್ಯಾರೇ ಆಗಿರಲಿ, ಸದನ ನಡೆಯುವ ಸಂದರ್ಭದಲ್ಲಿ ತಮ್ಮ ಪರವಾನಿಗೆ ಇಲ್ಲದೆ ಹೊರಗಡೆ ಹೋಗುವುದಾಗಲಿ, ಮಾಡಿರುವುದಿಲ್ಲ. ನಾವು ಅನುಸರಿಸಲೇಬೇಕಾದ ಮಾರ್ಗಸೂಚಿಯಾಗಿದೆ. ಆದರೆ, ಇದನ್ನೇ ಬಹಳ ದೊಡ್ಡದಾಗಿ ಬೆಳೆಸಿಕೊಂಡು ಹೋಗಬಾರದು. ತಾವೇನು ಅಪ್ಪಣೆ ಕೊಟ್ಟಿದ್ದೀರಿ, ಮುಂದಿನ ಸಂದರ್ಭಗಳು ಬಂದಾಗ, ಒಮ್ಮೊಮ್ಮೆ ಇಂಥ ತಪ್ಪುಗಳು ಆಗಿರುತ್ತವೆ. ಅದು ತಪ್ಪು ಎಂದು ಭಾವಿಸಿಕೊಂಡಿದ್ದೇವೆ. ಆದರೂ ಕೂಡ ಇದು ನಡೆದಿರತಕ್ಕಂಥಾದ್ದಾದಾಗ ಖಂಡಿತವಾಗಿಯೂ ಕೂಡ ಎಲ್ಲ ಮಂತ್ರಿಗಳೂ ಕುಡ ಇವತ್ತು ಕಡೆಯ ದಿವಸ ಮುಂದಿನ ದಿವಸ ಆಗಿದ್ದರೆ ಕಟ್ಟುನಿಟ್ಟಾಗಿ ಹೇಳಬಹುದಾಗಿತ್ತು. ತಾವು ಪತ್ರ ಬರೆದ ಮೇಲೆ ಮುಖ್ಯಮಂತ್ರಿಗಳು ಎಲ್ಲ ಸದಸ್ಯರಿಗೂ ಕೂಡ ಸಚಿವಸಂಪುಟ ಸಭೆಯಲ್ಲಿನ ಈ ವಿಷಯವನ್ನು ಪ್ರಸ್ತಾಪ ಮಾಡಿ ಹೇಳಿದ್ದಾರೆ. ಅದನ್ನು ಹೇಳಿದಂಥ ಸಂದರ್ಭದಲ್ಲಿ ಕೆಲವರು absent ಆಗಿದ್ದಾರೆ. ಅದು ಸರಿಯಾದುದಲ್ಲ.

ಆದ್ದರಿಂದ, ಆ ವಿಚಾರದಲ್ಲಿ ಖಂಡಿತವಾಗಿ ಇದನ್ನು ಇಲ್ಲಿಗೆ ಬಿಟ್ಟುಬಿಡೋಣ. ಏಕೆಂದರೆ, ಇದು ಕೊನೆಯ ದಿವಸ. ವಿಧೇಯಕಗಳನ್ನು ತಾವು ಅಜೆಂಡಾದ ಪ್ರಕಾರ ಕೈಗೆತ್ತಿಕೊಳ್ಳಬೇಕಾಗಿದೆ. ಆ ವಿಧೇಯಕಗಳು pass ಆದ ತಕ್ಷಣವೇ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ ಆ ವಿಚಾರದಲ್ಲಿ ಬರಗಾಲದ ಬಗ್ಗೆ ಅವರನ್ನು

ಮನವೊಲಿಸುವಂಥ ರೀತಿಯಲ್ಲೇ ನಾವೇನೇನು ಮಾಡಿದ್ದೇವೆಂದು ಉತ್ತರ ಕೊಡುತ್ತೇವೆ. ಅದಾದಮೇಲೆ ಮಾನ್ಯ ಮಾಧುಸ್ವಾಮಿಯವರು ಪ್ರಸ್ತಾಪ ಮಾಡಿದ ವಿಚಾರದ ಬಗ್ಗೆ ಚರ್ಚೆ ಮಾಡೋಣ. ಬಸವರಾಜು, ಬೋಪಯ್ಯನವರು, ಜೀವಿಜಯರವರು ಕೊಡಗಿಗೆ ಸಂಬಂಧಪಟ್ಟ ವಿಷಯವನ್ನು ಪ್ರಸ್ತಾಪ ಮಾಡಿದರು. ಅದು ಸ್ವಲ್ಪವೇ ನಿಮಿಷಗಳಲ್ಲೇ ಮುಗಿದುಹೋಗುತ್ತದೆಂದು ಅದನ್ನು ಕೈಗೆತ್ತಿಕೊಂಡು ನಂತರ ಬರಗಾಲದ ವಿಷಯ, ನಂತರ ಮಾಧುಸ್ವಾಮಿಯವರು ಪ್ರಸ್ತಾಪಿಸಿದ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬಹುದು. ನಿಮ್ಮ ಮಾರ್ಗದರ್ಶನವನ್ನು ಖಂಡಿತವಾಗಿಯೂ ನಾವು ಪರಿಪಾಲಿಸುತ್ತೇವೆಂದು ಹೇಳಿ, ಇದನ್ನು ಇಲ್ಲಗೇ ಬಿಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) :- ನಾವೇನೂ ಉಪ ಮುಖ್ಯಮಂತ್ರಿಗಳು ಬರಲೇಬೇಕೆನ್ನುವಂಥ ರೀತಿಯಲ್ಲಿ ಹೇಳಿಲ್ಲ. ಮುಖ್ಯಮಂತ್ರಿಗಳು ಕೂಡ ಇದ್ದಾರೆ. He is a competent person. ನಾವೇನು ಕೇಳುತ್ತೇವೆ ಅದಕ್ಕೆ ಅವರು ಉತ್ತರ ಹೇಳಬಹುದು. ಇವತ್ತು ಸದನ ನಡೆಯುವ ಕಾಲದಲ್ಲಿ ಅವರು ಏನೂ ಮಾಡಿಲ್ಲವೆಂದು ನೀವು ಹೇಳಿದರಲ್ಲ, regional imbalance ಗೆ 32,000 ಕೋಟಿಗಿಂತ ಹೆಚ್ಚು ಕೊಡುತ್ತೇವೆಂದು ಹೇಳಿರುವುದು ಪತ್ರಿಕೆಯಲ್ಲಿ ವರದಿಯಾಗಿದೆ. ನಾವು ಹೇಳುವುದು ಸಹ ಪತ್ರಿಕಾ ವರದಿಯ ಆಧಾರದ ಮೇಲೆಯೇ ಹೊರತು ಕೇಳಿ ಹೇಳುವುದಲ್ಲ. ಒಂದು ವೇಳೆ Assembly ನಡೆಯುತ್ತಿರುವಾಗ, outside the Assembly, ನಾವೆಲ್ಲ ಸದನದಲ್ಲಿದ್ದೇವೆ, ಆ ರೀತಿ ಹೇಳತಕ್ಕಂಥದ್ದು ಸರಿಯಲ್ಲ. ಸದನ ನಡೆಯುವ ಕಾಲದಲ್ಲಿ ಇವತ್ತು ಅವರೊಬ್ಬ important portfolio ಹೊಂದಿರುವಂಥ ಮತ್ತು ರಾಜ್ಯ ಉಪಮುಖ್ಯಮಂತ್ರಿಗಳು ಸಹ ಆಗಿದ್ದಾರೆ. ಯಾವಾಗಲೂ ಕೂಡ ನಾವು political parties ಗೆ ಸಂಬಂಧಪಟ್ಟವರು. ನಮ್ಮ ಪಕ್ಷದ ರಾಷ್ಟ್ರೀಯ ನಾಯಕರು, ಬೇರೆಯವರು ಬಂದಾಗ ನಾವೂ ಕೂಡ ಒಂದು ದಿವಸ ಕೇಳುತ್ತೇವೆ. ಅವರೂ ಕೂಡ ರಾಜನಾಥ್‌ಸಿಂಗ್‌ರವರು ಬರುತ್ತಿರುವುದರಿಂದ 10 ನೇ ತಾರೀಖು ಆಗುವುದಿಲ್ಲ, 11 ನೇ ತಾರೀಖು ಬಂದು ಉತ್ತರ ಕೊಡುತ್ತೇವೆಂದು ಹೇಳಿದರು. ಸತತವಾಗಿ 12, 13 ಎಲ್ಲಾ ಕಡೆ ಇದ್ದು ಹೊರಗಡೆ ಘೋಷಣೆ ಮಾಡುವುದು ಸರಿಯಲ್ಲ. ಅದು ಹಕ್ಕುಚ್ಯುತಿಯಾಗುತ್ತದೆ ಎಂದು ಪ್ರಸ್ತಾಪಿಸಲಾಗಿದೆ.

ಎರಡನೆಯದಾಗಿ, ತಂಬಾಕು ಬೆಳೆಗಾರರ ವಿಷಯದ ಬಗ್ಗೆ ನಿನ್ನೆ ಪ್ರಸ್ತಾಪವಾಗಿದೆ. ಅದರ ಬಗ್ಗೆ ಸಹ ಇಲ್ಲಿ ಉತ್ತರ ಕೊಡುತ್ತೇವೆಂದು ಹೇಳಿದ್ದಾರೆ.

ಅದರ ಬಗ್ಗೆ ಸಹ ಉತ್ತರ ಕೊಡಬೇಕು. ಕಬ್ಬು ಬೆಳೆಗಾರರು ರಾಜ್ಯದಲ್ಲಿ ತೊಂದರೆಗೊಳಗಾಗುತ್ತಿರುವ ಸಂದರ್ಭದಲ್ಲಿ ಕರೆದಿರುವ ಸಭೆಗೂ ಅವರು ಬರಲಿಲ್ಲ. ಅದಕ್ಕೆ ಬರಬೇಕೆನ್ನುವುದಷ್ಟೇ ನಮ್ಮ ವಾದ. Business Advisory Committee ನಲ್ಲಿ ಏನು ಮಾತಾಗಿದೆ, ನಾವು 11 ರಂದು ಒಂದು ದಿವಸ ಎಂದು ಹೇಳಿದೆವು, ನೀವು 12 ಮತ್ತು 13 ಎಂದು ಹೇಳಿದಿರಿ. ಆ ವಿಚಾರ ಬಿಡಿ. ನಿನ್ನೆ ದಿವಸ ನಮ್ಮದು ನಿಮ್ಮದು ಮಾತುಕತೆ ಏನಾಗಿದೆ, ನಾವು ನಿನ್ನೆ Adjournment Motion ಕೊಟ್ಟಿದ್ದೆವು. ತಾವು ನಿಯಮ 69 ಕ್ಕೆ convert ಮಾಡಿದಿರಿ. ಇದು ಕೇವಲ ನಮ್ಮ ಪಕ್ಷಕ್ಕೆ ಸಂಬಂಧಪಟ್ಟಿದ್ದಲ್ಲ. ಇದು ಇಡೀ ರಾಜ್ಯದ ಎಲ್ಲಾ ಶಾಸಕರಿಗೆ ಸಂಬಂಧಪಟ್ಟಂಥ ವಿಷಯ. ನಾಳೆಯಿಂದ ನಮ್ಮ ನಮ್ಮ ಕ್ಷೇತ್ರಗಳಿಗೆ ಹೋಗುತ್ತೇವೆ. ನೀವು ಎಷ್ಟು ಬಿಡುಗಡೆ ಮಾಡಿದಿರಿ, ಏನು ಕೆಲಸ ಆಗಿದೆ, ತಾವು ಉತ್ತರ ಹೇಳುವಾಗ ಹೇಳಿ, ನಾವು ಕೇಳುವುದಕ್ಕೆ ತಯಾರಿದ್ದೇವೆ.

ಈಗ ಏನೆಂದರೆ, ಇವತ್ತು ಎಚ್ಚರಿಕೆ ಕೊಡತಕ್ಕಂಥ ರೀತಿಯಲ್ಲಿ ಎಷ್ಟು ಕೆಲಸ ಕಾರ್ಯಗಳು ಕ್ಷೇತ್ರದಲ್ಲಿ ಆಗುತ್ತದೆ, ಕುಡಿಯುವ ನೀರಿನ ಸಮಸ್ಯೆ ಇವೆಲ್ಲಾ ಸಮಸ್ಯೆ ಇದೆ. ನಾವೇನು ಆರೋಪಣೆ ಮಾಡತಕ್ಕಂಥಾದ್ದು ಅಲ್ಲ. ಇವತ್ತು ಬಿಲ್‌ಗಳೇನು ಅಷ್ಟು ಅರ್ಜೆಂಟ್ ಏನೂ ಇಲ್ಲ. ಅರ್ಜೆಂಟ್ ಇರುವಂಥ ಬಿಲ್‌ಗಳಿಗೆ ನಿನ್ನೆ ಮತ್ತು ಮೊನ್ನೆ ದಿವಸ ಪಾಸ್ ಮಾಡಿ ಕೊಟ್ಟಿದ್ದೇವೆ. ಇವತ್ತು ಮಾಧುಸ್ವಾಮಿಯವರು ಕೂಡ ಬಹಳ ಪ್ರಮುಖವಾದ ವಿಚಾರ ಎತ್ತಿದ್ದಾರೆ. ಅದರ ಬಗ್ಗೆ ಚರ್ಚೆಯಾಗಬೇಕು. ಬರಗಾಲದ ಬಗ್ಗೆ ಚರ್ಚೆಯಾಗಬೇಕು. ಬಸವರಾಜುರವರು ಹೇಳುತ್ತಾರೆ, ಕೊನೆಯ ದಿವಸದಲ್ಲಿ ಏನಾಗುತ್ತದೆ, ರಾಜ್ಯಕ್ಕೆ ಸಂಬಂಧಪಟ್ಟಂಥ ತುರ್ತಾದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಅದಕ್ಕೆ ಈಗ ಬರಗಾಲದ ಬಗ್ಗೆ ಚರ್ಚೆ ಪ್ರಾರಂಭ ಮಾಡೋಣ.

ಅಧ್ಯಕ್ಷರು :- ಈಗ ವಿಧೇಯಕಗಳನ್ನು ಮೇಲ್ಮನೆಗೆ ತೆಗೆದುಕೊಂಡು ಹೋಗಬೇಕು.

ಶ್ರೀ ಎನ್. ಧರ್ಮಸಿಂಗ್ :- ಆಗಲ್ಲ. ನಿನ್ನೆ ದಿವಸ ತಾವೇ ಹೇಳಿದ್ದೀರಿ. ಬರಗಾಲದ ಚರ್ಚೆ ಮೊದಲು ಆಗಲಿ. ಆಮೇಲೆ ವಿಧೇಯಕದ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಸಿದ್ಧರಾಮಯ್ಯ :– ವಿಧೇಯಕಗಳ ಮೇಲೆ ಆಮೇಲೆ ಚರ್ಚೆ ಮಾಡಿ, ನಾವೇನು ಬೇಡವೆನ್ನುವುದಿಲ್ಲ. Legislature ಇರುವುದೇ ವಿಧೇಯಕ ಮಾಡುವುದಕ್ಕೆ.

ಅಧ್ಯಕ್ಷರು :– ಹಾಗಲ್ಲ, ಆ ಮೆನೆಗೆ ತೆಗೆದುಕೊಂಡು ಹೋಗಬೇಕು. ಈಗ ಕೆಲವು ಸಣ್ಣ ಸಣ್ಣ ಬಿಲ್‌ಗಳು ಇವೆ. ಇದನ್ನು ಮುಗಿಸಿ ಆಮೇಲೆ ತೆಗೆದುಕೊಳ್ಳೋಣ.

ಶ್ರೀ ಸಿದ್ಧರಾಮಯ್ಯ :– ಈಗ ಅವರು ನಿಲುವಳಿ ಸೂಚನೆ ತಂದಿದ್ದಾರೆ, ಏಕೆ ತಂದರು? ಬಹಳ ಮಹತ್ವದ ವಿಚಾರ.

ಅಧ್ಯಕ್ಷರು :– ಸಿದ್ಧರಾಮಯ್ಯನವರೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನಲ್ಲ. Please understand.

ಶ್ರೀ ಸಿದ್ಧರಾಮಯ್ಯ :– ಸ್ವಲ್ಪ ಕೇಳಿ. ಅದರ importance ಹೋಗಿ ಬಿಡುತ್ತದೆ. ರಾಜ್ಯದಲ್ಲಿ ಬರಗಾಲ ಇದೆ, ಅದರ ಬಗ್ಗೆ ಚರ್ಚೆ ಮಾಡಬೇಕೆಂದು ನಿಲುವಳಿ ಸೂಚನೆ ತೆಗೆದುಕೊಂಡು ಬಂದರೆ, ನೀವು ನಿಯಮ 69 ಕ್ಕೆ convert ಮಾಡಿದಿರಿ.

ಅಧ್ಯಕ್ಷರು :– ಆಯಿತು ಆದರೆ ಆ ಮನೆಗೆ ತೆಗೆದುಕೊಂಡು ಹೋಗಬೇಕಲ್ಲ.

ಶ್ರೀ ಸಿದ್ಧರಾಮಯ್ಯ :– ಆಯಿತು ಈಗ ಬರಗಾಲದ ಬಗ್ಗೆ ಚರ್ಚೆ ಮಾಡುವುದಕ್ಕೆ ಪ್ರಾರಂಭಿಸಿ. ಈಗ ಉಪ ಮುಖ್ಯಮಂತ್ರಿಗಳು ಕರ್ನಾಟಕದಲ್ಲೆಲ್ಲಾ ಭಾಷಣ ಮಾಡಿಕೊಂಡು ಬರುತ್ತಿದ್ದಾರೆ, ಬಜೆಟ್‌ನಲ್ಲಿ ಇಲ್ಲದೇ ಇರುವುದನ್ನು ಹೇಳಿಕೊಂಡು ಬರುತ್ತಿದ್ದಾರೆ, ಅದನ್ನು ಬೇಡವೆಂದು ಬಿಡುತ್ತೀರಿ. ಇಲ್ಲಿ ಬರಗಾಲದ ಚರ್ಚೆ ಮಾಡಬೇಕೆಂದರೆ ನೀವು ಅದಕ್ಕೆ ತಯಾರಿಲ್ಲವೆಂದರೆ, ಯಾವುದು ಬಹಳ ಮುಖ್ಯ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಮಾನ್ಯ ಅಧ್ಯಕ್ಷರೆ, Zero Hour, Calling Attention, ಇವೆಲ್ಲದಕ್ಕೂ ಅವಕಾಶ ಕೊಡುತ್ತೇನೆಂದು ಹೇಳಿದ್ದು.

ಶ್ರೀ ಸಿದ್ಧರಾಮಯ್ಯ :– ನೀವೇ ಹೇಳಿದ್ದು, ಮಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು :– ನಾನು ಅವಕಾಶ ಕೊಡುತ್ತೇನೆ.

ಶ್ರೀ ಸಿದ್ಧರಾಮಯ್ಯ :– ಅವರಿಗೆ ಕೊಡಿ ಅವರು ಮಾತನಾಡಲಿ, Our request is, ಇದು priority issue.

ಅಧ್ಯಕ್ಷರು :- ಇಲ್ಲಿ ಕೇಳಿ, ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ವಿಧೇಯಕ ಏನಿದೆ, ಇದೊಂದು ಐದು ನಿಮಿಷದ ಬಿಲ್.

ಶ್ರೀ ಎನ್. ಧರ್ಮಸಿಂಗ್ :- ಇಲ್ಲ ಇಲ್ಲ ಬಿಲ್‌ಗೆ ಅವಕಾಶವಿಲ್ಲ.

ಶ್ರೀ ಸಿದ್ಧರಾಮಯ್ಯ :- ಬಿಲ್ ಬೇಡ.

ಅಧ್ಯಕ್ಷರು :- ಇಷ್ಟೊಂದು adamant ಆಗಿಬಿಟ್ಟರೆ ಹೇಗೆ?

(ಗೊಂದಲ)

ಶ್ರೀ ಎನ್. ಧರ್ಮಸಿಂಗ್ :- ತಾವು ಈ ಪೀಠದಲ್ಲಿ ಕುಳಿತು ಆಶ್ವಾಸನೆ ಕೊಟ್ಟಿದ್ದೀರಿ, ತಾವು ಈಗ ಅವಕಾಶ ಕೊಡಿ. ಬರಗಾಲದ ಬಗ್ಗೆ ಚರ್ಚೆಯಾಗಲೇ ಬೇಕು.

ಅಧ್ಯಕ್ಷರು :- ಎರಡು ಗಂಟೆಗಳ ಕಾಲ ಅವಕಾಶ ಕೊಡುತ್ತೇನೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಜನ ಕುಡಿಯುವುದಕ್ಕೆ ನೀರು ಇಲ್ಲದೇ ಸಾಯುತ್ತಿದ್ದಾರೆ, ಇಂಥದ್ದರಲ್ಲಿ ನೀವು ಬರಿ ಬಿಲ್‌ಗಳನ್ನು ತೆಗೆದು ಕೊಳ್ಳುತ್ತೇವೆಂದರೆ ಹೇಗೆ? ಬರಗಾಲದ ಬಗ್ಗೆ ಚರ್ಚಿಸಲು ಅವಕಾಶ ಕೊಡಿ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ :- ಸನ್ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಪ್ರಾರ್ಥನೆ ಮಾಡುವುದು, ವಿಧಾನ ಪರಿಷತ್ತು ಈಗ ನಡೆಯುತ್ತಿದೆ...

ಶ್ರೀ ಎನ್. ಧರ್ಮಸಿಂಗ್ :- ಎರಡು ತಾಸುಗಳ ಕಾಲ ಚರ್ಚೆಯಾದ ನಂತರ ನಾಲ್ಕು ಗಂಟೆಗೆ ಕರೆಸಿ ಮಾತನಾಡಿ.

ಶ್ರೀ ಎಂ.ಪಿ. ಪ್ರಕಾಶ್ :- ಸಂಜೆ ಆಗಿಬಿಡುತ್ತದೆ. ಬರಗಾಲ ಈ ನಿಮಿಷದಲ್ಲಿ ಆಗುವುದಲ್ಲ. ಇವು ಆಗಲೇ ಬೇಕಾಗಿರತಕ್ಕಂಥಾದ್ದು. ಈಗ ನಾಲ್ಕು ಬಿಲ್‌ಗಳು ಇವೆ. ಶ್ರೀ ಇಕ್ಬಾಲ್ ಅನ್ಸಾರಿ, ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ತಂದಿರುವ ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ತಿದ್ದುಪಡಿ ವಿಧೇಯಕ, ಇದೊಂದು ಟೆಕ್ನಿಕಲ್ ಇದೆ, ಬೇಗ ಮುಗಿಸಿಬಿಡುತ್ತೇವೆ, ನಂತರ ಸನ್ಮಾನ್ಯ ಆರೋಗ್ಯ ಮಂತ್ರಿಗಳು ತಂದಿರುವ ಖಾಸಗಿ ವೈದ್ಯಕೀಯ ಸಂಸ್ಥೆಗಳ

ವಿಧೇಯಕದ ಬಗ್ಗೆ, ತಮ್ಮಲ್ಲಿ ಕೂಡ ಬಹಳ ಜನ support ಕೂಡ ಮಾಡಿದ್ದೀರಿ. ಅದನ್ನು ತರುತ್ತೇವೆ. ಕೃಷಿ ಉತ್ಪನ್ನ ಮಾರುಕಟ್ಟೆ ವಿಚಾರದಲ್ಲಿ ಮಾನ್ಯ ದರ್ಶನಾಪುರರವರು ಒಂದು ಬಿಲ್‌ನ್ನು ಮಂಡನೆಯನ್ನು ಮಾಡುತ್ತಾರೆ.

ಶ್ರೀ ಎನ್. ಧರ್ಮಸಿಂಗ್ :– ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ತಾವು ನಿನ್ನೆ ಏನು ಆಶ್ವಾಸನೆ ಕೊಟ್ಟಿದ್ದೀರಿ ಅದರಿಂದ ಹಿಂದೆ ಹೋಗುತ್ತಿದ್ದೀರಿ. ಸದನ ಪ್ರಾರಂಭವಾದ ಮೇಲೆ ಬರಗಾಲದ ಮೇಲೆ ಚರ್ಚೆಗೆಂದು ನಿನ್ನೆ ನೀವು ಒಪ್ಪಿಕೊಂಡ ಮೇಲೆ, ವಿಧೇಯಕಗಳನ್ನು ಮಂಡಿಸಿ ಅನುಮೋದನೆ ಮಾಡಿ ಸಂಪೂರ್ಣವಾದ ಸಹಕಾರವನ್ನು ರಾತ್ರಿ 8 ಗಂಟೆಯವರೆಗೆ ತಮಗೆ ಕೊಟ್ಟಿದ್ದೇವೆ. ರಾತ್ರಿ 8 ಗಂಟೆಯವರೆಗೆ ನಾವೆಲ್ಲರೂ ಇದ್ದೆವು, ಇನ್ನು ನಿಮ್ಮವರು ಯಾರೂ ಇರಲಿಲ್ಲ. ಮುಖ್ಯಮಂತ್ರಿಗಳು ಮಂಡನೆ ಮಾಡಿರುವ ಬಿಲ್‌ಗೆ ನಾವು ಅನುಮೋದನೆ ಕೊಟ್ಟಿದ್ದೇವೆ. ಆದರೆ ಜೊತೆಗೆ ಶಿಕ್ಷಣದ ಬಿಲ್‌ಗೂ ಕೂಡ ಮನ್ನಣೆ ಮಾಡಿದ್ದೇವೆ. ಇವತ್ತು ಈ ಬರಗಾಲದ ಬಗ್ಗೆ ಚರ್ಚೆ ಆಗಬೇಕು. ಈ ಚರ್ಚೆ ಬಿಟ್ಟು ವಿಧೇಯಕಗಳನ್ನು ಮಂಡಿಸುವುದಾದರೆ, ನಾವು ಅದರ ಬಗ್ಗೆ ಆಕ್ಷೇಪಣೆ ಮಾಡುತ್ತೇವೆ, ಮತ್ತು ಈ ಬರಗಾಲದ ಬಗ್ಗೆ ಈಗಲೇ ಚರ್ಚೆ ಪ್ರಾರಂಭವಾಗಬೇಕೆಂದು ನಾವೀಗ ಪ್ರತಿಭಟನೆ ಇಲ್ಲಿಯೇ ಮಾಡುತ್ತೇವೆ.

ಅಧ್ಯಕ್ಷರು :– ವಿರೋಧ ಪಕ್ಷದ ನಾಯಕರು ಈ ರೀತಿ ದುಡುಕಿದರೆ ಹೇಗೆ? ಸ್ವಲ್ಪ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ :– ಇವತ್ತು ಕೊನೆಯಲ್ಲವೆ ? ನಮಗೆ ಅನುಮತಿ ಕೊಡಬೇಕು.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದು ಪ್ರತಿಭಟನೆಯಲ್ಲಿ ತೊಡಗಿದರು)

ಶ್ರೀ ಹೆಚ್.ಡಿ. ಬಸವರಾಜು :– ನಿಮ್ಮ ಉದ್ದೇಶವೇ ನಮಗೆ ಅರ್ಥವಾಗುತ್ತಿಲ್ಲ. ಸದನ ನಡೆಯಬೇಕೆ ಬೇಡವೆ? ನೀವು ಒಂದು ಸಲ ವಿಧೇಯಕಗಳು ಪಾಸ್ ಆಗಬೇಕೆಂದು ಹೇಳುತ್ತೀರಿ, ವಿಧೇಯಕಗಳು ಪಾಸ್ ಮಾಡಲಿಕ್ಕೆ ಸಹಕಾರ ಕೊಡುತ್ತೇವೆಂದು ಹೇಳುತ್ತೀರಿ, ಇದೇನಾ ನಿಮ್ಮ ಸಹಕಾರ?

(ಗೊಂದಲ)

ಅಧ್ಯಕ್ಷರು :- ಒಂದು ಅರ್ಧಗಂಟೆ ಮುಕ್ಕಾಲು ಗಂಟೆ ಚರ್ಚೆಗೆ ಅವಕಾಶಕೊಡುತ್ತೇನೆ. ಇದೇ ಗಂಟೆಯಲ್ಲಿ, ನಕ್ಷತ್ರದಲ್ಲಿ ಕೊಡಬೇಕೆ?

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ರೂಲ್ 69 ನಲ್ಲಿ ಅವಕಾಶ ಕೊಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಬರಗಾಲದ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ :- ಬರಗಾಲದ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕು. ಕುಡಿಯುವ ನೀರಿಗೆ ತೊಂದರೆಯಿದೆ. ಮಳೆ ಇಲ್ಲ, ನೀರು ಇಲ್ಲ, ಬರಗಾಲದ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನೀವು ಆ ರೀತಿ ಬಿಲ್‌ಗಳನ್ನು ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು :- ದಯಮಾಡಿ ನೀವು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ. ಅರ್ಧಗಂಟೆ ಅವಕಾಶ ಕೊಡಿ. ಕೆಲವು ಮುಖ್ಯವಾದ ವಿಧೇಯಕಗಳು ಇವೆ. ದಯಮಾಡಿ ಅವಕಾಶ ಕೊಡಿ, ನೀವು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ. ನೀವು ಈ ರೀತಿ ಮಾಡಿದರೆ, ಅದನ್ನು ಏನೆಂದರೆ ನಾನು guillotine ಮಾಡಬೇಕಾಗುತ್ತದೆ ಅಷ್ಟೆ ಇದನ್ನು ದಯಮಾಡಿ ಮೇಲೆ ನಿಮಗೆ ಎರಡು ಗಂಟೆಗಳ ಕಾಲ ಅವಕಾಶ ಕೊಡುತ್ತೇನೆ.

(ಗೊಂದಲ)

ಈಗ ನಾನು ವಿಧೇಯಕಗಳನ್ನು ಮತಕ್ಕೆ ಹಾಕಿ ಬಿಡುತ್ತೇನೆ ಅಷ್ಟೇ. ದಯಮಾಡಿ ನೀವು ನಿಮ್ಮ ಸ್ಥಾನಗಳಿಗೆ ಹೋಗಬೇಕು. ಈಗ ವಿಧೇಯಕಗಳನ್ನು ಮಂಡನೆ ಮಾಡುವುದು.

ಶ್ರೀ ಜಿ.ವಿ. ಶ್ರೀರಾಮರಡ್ಡಿ :- ದಯವಿಟ್ಟು ಬಿಲ್ ಪಾಸ್ ಮಾಡಬೇಡಿ.